# ಶ್ರೀ ಶಾರದಾ

ಮಾಸಪತ್ರಿಕೆ – 15 ಜನವರಿ 2012

॥ ಧಿಯೋ ಯೋನಃ ಪ್ರಚೋದಯಾತ್ ॥

ಬೆಲೆ ರೂ.2.50
WPP No. SK/MNG/WPP/69
D.O.P - 15th of every month from Udupi Sorting Office

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-12 ಸಂಚಿಕೆ-1 ಪುಟಗಳು-10 Registered Under No.J/UDP/1260/2012-2014 Dated from 01-01-2012 to 31-12-2014.



ಧಾರ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ಶೃಂಗೇರಿ ಶ್ರೀಶಾರದಾ ಪೀಠದ ಕೊಡುಗೆ

ಡಾ। ಎಚ್.ವಿ.ನರಸಿಂಹಮೂರ್ತಿ
ಪುಟ-6

ನಾ ಕಂಡ ಸಿಂಗಾಪುರ

- ಪ್ರಮೋದ್ ಮಾರ್ಪಳ್ಳಿ
ಪುಟ-7




ಶಂಕರ ಪ್ರತಿಷ್ಠಾನ ಕಾರ್ಕಳ : ರಜತಮಹೋತ್ಸವ
ಪುಟ-7

ಕನಕ ಕೇದಿಗೆ ಲಯನ್ಸ್ ಪುಟ-8
ಪ್ರಾಂತೀಯ ಸಮ್ಮೇಳನ



## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು : ಮಹಾಸಭೆ

ತಾ.25-12-2011ನೇ ಆದಿತ್ಯವಾರ ಸಂಜೆ 4 ಗಂಟೆಗೆ ಸಂಘದ ವಾರ್ಷಿಕ ಮಹಾಸಭೆಯು ಅಧ್ಯಕ್ಷರಾದ ಶ್ರೀ ಸಿ.ಎಸ್.ರಾಯರ ಅಧ್ಯಕ್ಷತೆಯಲ್ಲಿ ಶಾರದಾ ಮಂಟಪದಲ್ಲಿ ಜರಗಿತು. ಶ್ರೀ ವೈ.ಮೋಹನ ರಾವ್ ಇವರ ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡ ಸಭೆಯಲ್ಲಿ ಶ್ರೀ ಸಿ.ಎಸ್.ರಾಯರು ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯದರ್ಶಿಯವರಾದ ಶ್ರೀ ಬಿ. ಕೃಷ್ಣಮೂರ್ತಿ ರಾಯರು 2009-10ನೇ ಸಾಲಿನ ವರದಿಯನ್ನು ಓದಿದರು. ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು. ಅಧ್ಯಕ್ಷರಾದ ಶ್ರೀ ಸಿ.ಎಸ್.ರಾಯರು ವರದಿ ವರ್ಷದಲ್ಲಿ ಅಗಲಿದ ನಮ್ಮ ಸಮಾಜದ ಎಲ್ಲಾ ಗಣ್ಯರನ್ನು ಸ್ಮರಿಸಿ, 1 ನಿಮಿಷದ ಮೌನ ಪ್ರಾರ್ಥನೆ ಸಲ್ಲಿಸಲು ತಿಳಿಸಿದರು. ಹಾಗೆಯೇ ಸಭೆಯಲ್ಲಿ ಅಗಲಿದ ಗಣ್ಯರಿಗೆ ಮೌನ ಪ್ರಾರ್ಥನೆಯೊಂದಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಕಾರ್ಯದರ್ಶಿಯವರು 2010-11ನೇ ಸಾಲಿನ ನೋಟೀಸನ್ನು ಓದಿದರು. ಸರ್ವಾನುಮತದಿಂದ ಸಭೆಯು ಅಂಗೀಕರಿಸಿತು. 2010-11ನೇ ಸಾಲಿನ ವರದಿಯನ್ನು ಕಾರ್ಯದರ್ಶಿ ಬಿ.ಕೃಷ್ಣಮೂರ್ತಿ ರಾಯರು ಮಂಡಿಸಿ ಸಭೆಯ ಅಂಗೀಕಾರವನ್ನು ಪಡೆದರು.

ಕೋಶಾಧಿಕಾರಿಯವರಾದ ಡಾ। ವೈ. ಸುದರ್ಶನ ರಾಯರು 2010-11ನೇ ವರ್ಷದ ಆಯ-ವ್ಯಯ ಮತ್ತು ಆಸ್ತಿ-ಜವಾಬ್ದಾರಿ ತಃಖ್ತೆಗಳ ಪರಿಶೋಧಿತ ವರದಿಯನ್ನು ಹಾಗೂ 2011-12ನೇ ವರ್ಷಕ್ಕೆ ಅಂದಾಜು ಆಯ-ವ್ಯಯ ಪಟ್ಟಿಯನ್ನು ಸಭೆಗೆ ತಿಳಿಸಿ ಅಂಗೀಕಾರವನ್ನು ಪಡೆದರು. ಸಭೆಯಲ್ಲಿ ವ್ಯಕ್ತವಾದ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಅಧ್ಯಕ್ಷರು, ಕಾರ್ಯದರ್ಶಿ ಹಾಗೂ ಕೋಶಾಧಿಕಾರಿಯವರು ನೀಡಿದರು. ಹಾಗೆಯೇ 2011-12ನೇ ಸಾಲಿಗೆ ಲೆಕ್ಕ ಪರಿಶೋಧಕರಾಗಿ ಶ್ರೀ ಕೆ. ಗಣೇಶ ಹೆಬ್ಬಾರ್, ಹೆಬ್ಬಾರ್ ಎಸೋಸಿಯೇಟ್ಸ್ ಉಡುಪಿ ಅವರನ್ನು ಸರ್ವಾನುಮತದಿಂದ ನೇಮಿಸಲಾಯಿತು. ಕೊನೆಯಲ್ಲಿ ಸಂಘದ ಜತೆ ಕಾರ್ಯದರ್ಶಿ ಯು.ಅರವಿಂದ ಕುಮಾರ್ ಧನ್ಯವಾದವನ್ನಿತ್ತರು.

-ಕಾರ್ಯದರ್ಶಿ

## ಶ್ರೀಶಾರದಾ ದೇವಸ್ಥಾನದಲ್ಲಿ ಸಾಮೂಹಿಕ ಚಂಡಿಕಾಹೋಮ-ಯಕ್ಷಗಾನ



ಉಡುಪಿಯ ಕುಂಜಿಬೆಟ್ಟು ಶಾರದಾ ನಗರ ಶ್ರೀ ಶಾರದಾ ದೇವಸ್ಥಾನದಲ್ಲಿ ನಮ್ಮ ಸಮಾಜ ಬಾಂಧವರು ಅಲ್ಲದೆ ಭಕ್ತಾಭಿಮಾನಿಗಳು ಕೂಡಾ ಶ್ರೀದೇವಿಗೆ ಸೇವೆಯನ್ನು ನೀಡುತ್ತಿರುವುದು ಸಂತೋಷದ ವಿಷಯ. ಕಳೆದ ಹಲವಾರು ವರ್ಷಗಳಿಂದ ಶ್ರೀಶಾರದಾ ದೇವಸ್ಥಾನದಲ್ಲಿ ಸಮಾಜ ಬಾಂಧವರ ಹಾಗೂ ಪರಿಸರದ ಭಕ್ತ ಜನರ ಅಪೇಕ್ಷೆಯಂತೆ ಪ್ರತೀ ತಿಂಗಳು ಸಾಮೂಹಿಕ ಗಣಹೋಮ, ಪ್ರತಿ ವರ್ಷ ಸಾಮೂಹಿಕ ದುರ್ಗಾಪೂಜೆ ಹಾಗೂ ಸಾಮೂಹಿಕ ಚಂಡಿಕಾ ಯಾಗವು ಜರಗುತ್ತಿದ್ದು ಸೇವೆಯಲ್ಲಿ ಪಾಲ್ಗೊಳ್ಳುವವರೂ ಹೆಚ್ಚಾಗುತ್ತಿದ್ದಾರೆ.

ಈ ಬಾರಿ ತಾ.25-12-2011ನೇ ಆದಿತ್ಯವಾರ ಉಡುಪಿ ಕುಂಜಿಬೆಟ್ಟು ಶಾರದಾ ಮಂಟಪದ ಶ್ರೀಶಾರದಾ ದೇವಸ್ಥಾನದ ಮುಂಭಾಗದಲ್ಲಿ ಸಾಮೂಹಿಕ ಚಂಡಿಕಾ ಹೋಮವು ಜರಗಿತು. ಬೆಳಿಗ್ಗೆ 8-30 ಗಂಟೆಗೆ ಶ್ರೀ ದೇವಸ್ಥಾನದಲ್ಲಿ ಕಾರ್ಯದರ್ಶಿಯವರಾದ ಶ್ರೀ ಬಿ. ಕೃಷ್ಣಮೂರ್ತಿರಾವ್, ಯಾಗ ಕರ್ತೃಗಳಾದ ಟಿ.ಎನ್.ಶ್ಯಾನುಭಾಗ ದಂಪತಿಗಳು ಹಾಗೂ ಸೇರಿದ ಭಕ್ತ ಸಮೂಹದೊಂದಿಗೆ ಪುರೋಹಿತರಾದ ಶ್ರೀ ನಾಗಭೂಷಣ ಶಾಸ್ತ್ರಿಗಳ ನೇತೃತ್ವದಲ್ಲಿ ಪ್ರಾರ್ಥನೆಯನ್ನು ಸಲ್ಲಿಸಿದರು. ನಂತರ ಪ್ರಾರಂಭಗೊಂಡ ಚಂಡಿಕಾಹೋಮವು ಮಧ್ಯಾಹ್ನ 12 ಗಂಟೆಗೆ ಪೂರ್ಣಾಹುತಿ ಗೊಂಡಿತು. ಋತ್ವಿಜರು ಹಾಗೂ ಉಡುಪಿ ಕುಂಜಿಬೆಟ್ಟು ಶಾರದಾ ದೇವಸ್ಥಾನದಲ್ಲಿ ನಡೆಸಲಾಗುವ ಸ್ವಾಧ್ಯಾಯ ಮಂಡಳಿಯವರು ದುರ್ಗಾಸಪ್ತಶತಿ ಪಾರಾಯಣ ನಡೆಸಿದರು. ಮಹಿಳೆಯರು ಲಲಿತಾ

(3ನೇ ಪುಟಕ್ಕೆ...)

## ವೈದ್ಯಕೀಯ ನೆರವು ನಿಧಿಗೆ ದೇಣಿಗೆ

ಉಡುಪಿ ಕುಂಜಿಬೆಟ್ಟಿನ ಶ್ರೀಮತಿ ಉಷಾ ಎಲ್.ಶ್ಯಾನುಭಾಗ್ ಅವರು (ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಕುಂಜಿಬೆಟ್ಟಿನ ಮಹಿಳಾವೇದಿಕೆಯ ಅಧ್ಯಕ್ಷೆ) ತಮ್ಮ ಪತಿ ದಿ। ಕೆ. ಲಕ್ಷ್ಮೀನಾರಾಯಣ ಶ್ಯಾನುಭಾಗ್ ಸ್ಮರಣಾರ್ಥ ರೂ.25,000/- ವೈದ್ಯಕೀಯ ನೆರವು ನಿಧಿಗೆ ನೀಡಿದ್ದಾರೆ. ಅವರಿಗೆ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘವು ಕೃತಜ್ಞತೆಯನ್ನು ಅರ್ಪಿಸುತ್ತದೆ.



## ಸಂಕ್ರಾಂತಿ ಶುಭಾಶಯಗಳು

ಎಲ್ಲ ಸಮಾಜ ಬಾಂಧವರಿಗೆ, ಶ್ರೀಶಾರದಾ ಪತ್ರಿಕೆಯ ಅಭಿಮಾನಿಗಳಿಗೆ, ಲೇಖಕರಿಗೆ ಹಾಗೂ ಪತ್ರಿಕೆಯಲ್ಲಿ ಜಾಹೀರಾತನ್ನು ನೀಡಿ ಸಹಕರಿಸಿದ ಎಲ್ಲರಿಗೂ ಮಕರ ಸಂಕ್ರಾಂತಿಯ ಶುಭಾಶಯಗಳು. **-ಸಂಪಾದಕ ಮಂಡಳಿ.**

## ಯುವ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಕುಂಜಿಬೆಟ್ಟು, ಉಡುಪಿ

### ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟ-2012

**ತಾ.05-02-2012ನೇ ರವಿವಾರ ಮಣಿಪಾಲದ ಮಣಿಪಾಲ ಪದವಿಪೂರ್ವ ಕಾಲೇಜು ಗ್ರೌಂಡ್ (ಎಂ.ಜೆ.ಸಿ.)ನಲ್ಲಿ ನಡೆಯಲಿದೆ.**
**ಆಸಕ್ತ ತಂಡಗಳು 31-01-2012ರೊಳಗೆ ಮೆನೇಜರ್ ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು (Ph : 0820-2520754), ದೇವದಾಸ್ ಶಾಸ್ತ್ರಿ ಆಳುಗ್ಗೇಲ್ ಹಿರಿಯಡ್ಕ (M : 9482046424), ಮಂಜುನಾಥ ಹೆಬ್ಬಾರ್, ಹೆಬ್ಬಾರ್ ಎಂಟರ್‌ಪ್ರೈಸಸ್, ಉಡುಪಿ (M : 9448437893, 9611099894) ಇವರಲ್ಲಿ ತಮ್ಮ ತಂಡದ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.**

ವಿ.ಸೂ. : 1) ಪಂದ್ಯಾವಳಿಯು ಓವರ್ ಆರ್ಮ್, ಟೆನ್ನಿಸ್‌ಬಾಲ್, ನಿಗದಿತ ಓವರ್‌ಗಳಂತೆ ನಡೆಯುತ್ತದೆ. 2) ಪಂದ್ಯಾವಳಿಯು ನಮ್ಮ ಸಮಾಜ ಬಾಂಧವರಿಗೆ ಮಾತ್ರ ಸೀಮಿತವಾಗಿದೆ. 3) ತಂಡಗಳು ಪಂದ್ಯಾಟದ ದಿನ ಬೆಳಿಗ್ಗೆ 8-30ಕ್ಕೆ ಕ್ರೀಡಾಂಗಣದಲ್ಲಿ ಹಾಜರಿದ್ದು ಸಹಕರಿಸಬೇಕು. 4) ಅಲೆವೂರು ದಿ। ಭುಜಂಗ ರಾವ್ ಮತ್ತು ದಿ। ಶಾಂತಾ ದೇವಿ ಸ್ಮರಣಾರ್ಥ ಅವರ ಪುತ್ರ ಅಲೆವೂರು ಶ್ಯಾಮರಾವ್ ನೀಡಿದ ನಗದು ಬಹುಮಾನ ರೂ.3,001/- ಮತ್ತು ರೂ.2,001/-ವನ್ನು ವಿಜೇತ ತಂಡಗಳಿಗೆ ವಿತರಿಸಲಾಗುವುದು.

ಇದೇ ದಿನ 10ನೇ ತರಗತಿಯವರೆಗಿನ ಮಕ್ಕಳಿಗೆ **ಜ್ಯೂನಿಯರ್ ಕ್ರಿಕೆಟ್ ಪಂದ್ಯಾಟ**ವೂ ನಡೆಯಲಿದೆ. ಆಸಕ್ತ ತಂಡಗಳು ಬೆಳಿಗ್ಗೆ 8-30ಕ್ಕೆ ಹಾಜರಿರಬೇಕಾಗಿ ಅಪೇಕ್ಷೆ.
**ಕ್ರಿಕೆಟ್ ಪಂದ್ಯಾಟಕ್ಕೆ ಪ್ರಾಯೋಜಕರಾಗಿ, ದಾನಿಗಳಾಗಿ ಹಾಗೂ ಬ್ಯಾನರ್ ಪ್ರದರ್ಶಿಸ ಬಯಸುವವರು ಶಾರದಾ ಮಂಟಪದ ಮ್ಯಾನೇಜರ್‌ರವರನ್ನು ಮುಂಚಿತವಾಗಿ ಸಂಪರ್ಕಿಸಬಹುದು.**

- ಅಧ್ಯಕ್ಷರು ಮತ್ತು ಸಂಚಾಲಕರು, ಕ್ರೀಡಾ ವೇದಿಕೆ

ತಾ.05-02-2012 ಬೆಳಿಗ್ಗೆ ಗಂಟೆ 9-00ರಿಂದ **ಮಹಿಳೆಯರು ಮತ್ತು ಮಕ್ಕಳಿಗಾಗಿ** ಶ್ರೀಶಾರದಾ ಮಂಟಪದಲ್ಲಿ

**ವಿವಿಧ ಒಳಾಂಗಣ ಕ್ರೀಡಾ ಸ್ಪರ್ಧೆಗಳನ್ನು** ಏರ್ಪಡಿಸಲಾಗಿದೆ.

**ಮಕ್ಕಳ ಮತ್ತು ಮಹಿಳಾ ವಿಭಾಗದ ಸ್ಪರ್ಧೆಗಳ ವಿವರ :** 1) 3 ವರ್ಷದೊಳಗಿನ ಮಕ್ಕಳಿಗೆ – **ಚಾಕಲೇಟ್ ಹೆಕ್ಕುವುದು** 2) 3-5 ವರ್ಷದೊಳಗಿನ ಮಕ್ಕಳಿಗೆ – **ಬಾಲ್ದಿಗೆ ಚೆಂಡು ಹಾಕುವುದು, ಕಪ್ಪೆ ಜಿಗಿತ** 3) 1ರಿಂದ 3ನೇ ತರಗತಿವರೆಗಿನ ಮಕ್ಕಳಿಗೆ – **ಬಾಟಲಿಗೆ ನೀರು ತುಂಬಿಸುವುದು, ಮಣಿ ಹೆಕ್ಕುವುದು** 4) 4ರಿಂದ 6ನೇ ತರಗತಿವರೆಗಿನ ಮಕ್ಕಳಿಗೆ – **ಮಣಿ ಪೋಣಿಸುವುದು, ಸ್ಮರಣ ಶಕ್ತಿ** 5) 7ರಿಂದ 10ನೇ ತರಗತಿ ವರೆಗಿನ ಮಕ್ಕಳಿಗೆ – **ಚೂಡಿದಾರ್ ಶಾಲಿಗೆ ರಬ್ಬರ್ ಬ್ಯಾಂಡನ್ನು ಸುತ್ತುವುದು, ಸ್ಕಿಪಿಂಗ್ ರೇಸ್ (ವಿ.ಸೂ. : ಶಾಲ್ ಮತ್ತು ಸ್ಕಿಪಿಂಗ್ ಹಗ್ಗವನ್ನು ಭಾಗವಹಿಸುವವರೇ ತರಬೇಕು)** 6) ಪಿ.ಯು.ಸಿ.ಯಿಂದ ಡಿಗ್ರಿಯವರೆಗೆ – **ಸೀರೆ ಮಡಚುವುದು** 7) ಮಹಿಳೆಯರಿಗೆ – **ಪಾಸಿಂಗ್ ದ ಬಾಲ್** 8) 60 ವರ್ಷ ಮೇಲ್ಪಟ್ಟ ಹೆಂಗಸರಿಗೆ – **ದಾರಕ್ಕೆ ಹಾಕಿದ ಗಂಟು ಬಿಡಿಸುವುದು** 9) 70 ವರ್ಷ ಮೇಲ್ಪಟ್ಟ ಹೆಂಗಸರಿಗೆ – **ನವಧಾನ್ಯಗಳನ್ನು ಗುರುತಿಸುವುದು. ಮಹಿಳೆಯರು ಮತ್ತು ಮಕ್ಕಳು ಆಸಕ್ತಿಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.**

ಇದೇ ದಿನ ವಧುವರರ ಮಾಹಿತಿ ಸಂಗ್ರಹ ಕಾರ್ಯಕ್ರಮವನ್ನು ಮಹಿಳಾ ವೇದಿಕೆಯು ಆಯೋಜಿಸಿದೆ. ವಧೂವರರ ಪಾಲಕರು ಹೆಚ್ಚಿನ ಸಂಖ್ಯೆಯಲ್ಲಿ ಈ ವೇದಿಕೆಯ ಸದುಪಯೋಗವನ್ನು ಪಡೆದುಕೊಳ್ಳಬೇಕಾಗಿ ವಿನಂತಿ. ಹೆಸರನ್ನು ನೋಂದಾಯಿಸುವವರು ವಧುವರರ ಭಾವಚಿತ್ರ, ಜಾತಕದ ಪ್ರತಿ, ಇತ್ಯಾದಿ ವಿವರಗಳನ್ನು ನೀಡಿ ವೇದಿಕೆಯಲ್ಲಿ ನೋಂದಾಯಿಸಬಹುದು. ಶ್ರೀಶಾರದಾ ಪತ್ರಿಕೆಯಲ್ಲಿ ವಧುವರರ ಮಾಹಿತಿಯನ್ನು ನೀಡಲು ಆಸಕ್ತಿಯುಳ್ಳವರು ಒಪ್ಪಿಗೆಯನ್ನು ನೀಡಬಹುದು.

- ಅಧ್ಯಕ್ಷರು ಮತ್ತು ಸಂಚಾಲಕರು, ಮಹಿಳಾ ವೇದಿಕೆ

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಎಚ್.ಎನ್. ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್ ಅಂಬಾಗಿಲು

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

ಸಮಾಜ ಬಾಂಧವರು ಯಾವುದೇ ಲೇಖನ, ಸುದ್ದಿ, ವರದಿ, ಇತ್ಯಾದಿಗಳನ್ನು ಕಳುಹಿಸುವಾಗ ತಮ್ಮ ಹೆಸರು ಮತ್ತು ವಿಳಾಸವನ್ನು ನಮೂದಿಸಿ ಸಹಕರಿಸಬೇಕಾಗಿ ವಿನಂತಿ.

–ಸಂಪಾದಕ ಮಂಡಳಿ

## ಚಿಂತನ

ದೇವರನ್ನು ಒಲಿಸಲು ಭಕ್ತಿ ಬೇಕೆನ್ನುತ್ತಾರೆ. ಹಾಗಾದರೆ ಭಕ್ತಿ ಎಂದರೇನು? ದೇವರನ್ನು ಮಂತ್ರ- ತಂತ್ರಗಳಿಂದ ಅಭಿಷೇಕ-ಅಲಂಕಾರ, ಮಂಗಳಾರತಿಯಿಂದ ಅರ್ಚಿಸುವುದು, ಪ್ರದಕ್ಷಿಣೆ-ನಮಸ್ಕಾರಗಳಿಂದ ಭಜಿಸುವುದು, ಭಜನೆ-ಸಂಕೀರ್ತನಗಳಿಂದ ಸ್ತುತಿಸುವುದೂ, ಇವು ಮಾತ್ರ ಭಕ್ತಿ ಮಾರ್ಗವೇ?

ಹಾಗಿದ್ದರೆ ಮಂತ್ರ-ತಂತ್ರ, ಭಜನೆ-ಸಂಕೀರ್ತನೆ ತಿಳಿಯದವರು ದೇವರ ಭಕ್ತಿ ಮಾಡಲು ಅರ್ಹರಲ್ಲವೆ?

ಮೇಲಿನ ಮಾರ್ಗಗಳಲ್ಲದೆ ದೇವರನ್ನು ಇನ್ನೂ ಬೇರೆ ರೀತಿಯಿಂದಲೂ ಒಲಿಸಿಕೊಳ್ಳಬಹುದು. ಅದೇ ಕೌಶಿಕ ಮಹಾಮುನಿಗೆ ಧರ್ಮವ್ಯಾಧನು ಹೇಳಿದ ಭಕ್ತಿ ಮಾರ್ಗ.


ಯಾವನೇ ಆದರೂ ತಮ್ಮ ಕರ್ಮವನ್ನು ನಿಯತ್ತಿನಿಂದ-ಧಾರ್ಮಿಕವಾಗಿ ಇನ್ನೊಬ್ಬನಿಗೆ ತೊಂದರೆಯಾಗದಂತೆ ನಿರ್ವಹಿಸಿದರೆ ಅದೇ ದೇವರನ್ನು ಒಲಿಸುವ ಉತ್ತಮ ಮಾರ್ಗವೆನಿಸಿದೆ.

ಒಬ್ಬ ಅಧಿಕಾರಿ ತನ್ನಲ್ಲಿಗೆ ಬರುವ ಜನಸಾಮಾನ್ಯರಿಗೆ ತನ್ನಿಂದ ಸಾಧ್ಯವಿದ್ದಷ್ಟು ಉತ್ತಮ ಸೇವೆ ಕೊಡುವುದು, ಕಾರ್ಮಿಕನಾದವನು ತನ್ನ ಯಜಮಾನನಿಗೆ ಯಾವುದೇ ನಷ್ಟವಾಗದಂತೆ ದುಡಿಯುವುದು, ಲಂಚ-ಭ್ರಷ್ಟಾಚಾರಗಳಿಲ್ಲದೇ ಯಾವತ್ತೂ ಕೆಲಸಗಳು ನಡೆಯುವಂತೆ ಪ್ರಯತ್ನಿಸುವುದು, ತನಗೊಪ್ಪಿಸಿದ ಕೆಲಸವನ್ನು ಪ್ರಾಮಾಣಿಕತೆ, ದಕ್ಷತೆಯಿಂದ ಮಾಡಿ ಮುಗಿಸುವುದು ಇಂತವರನ್ನು ಯಾವತ್ತೂ ದೇವರು ಕೈಬಿಡಲಾರನು.

ಹೀಗೆ ವೈದ್ಯ, ಅಧ್ಯಾಪಕ, ಪೋಲಿಸು, ರಾಜಕಾರಣಿ, ವಿದ್ಯಾರ್ಥಿ, ವೃದ್ಧ ಮಾತಾ-ಪಿತರ ಮಕ್ಕಳು, ಧನಿಕ-ಬಡವ, ಕಲಾವಿದ, ಕುಶಲಕರ್ಮಿ.... ಎಲ್ಲರೂ ತಾವು ಮಾಡುವ ಕೆಲಸದಲ್ಲಿನ ತೃಪ್ತಿಯನ್ನು ಕಾಣಬೇಕು. ಆ ಮೂಲಕ ತನ್ನ ಬಳಿ ಬರುವ ಎಲ್ಲರಿಗೂ ಒಳ್ಳೆಯದನ್ನೇ ಬಯಸಬೇಕು. ಇದೇ ಕರ್ಮದ ಮೂಲಕ ದೇವರನ್ನು ಕಾಣುವ ಭಕ್ತಿ ಮಾರ್ಗ ಎಂದು ತಿಳಿಯೋಣವೇ.

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



– ಕೆ. ಆತ್ಮಾರಾಮ ಶಾಸ್ತ್ರಿ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

ರುಕ್ಮಿಯ ಮತ್ತಿತರ ರಾಜರ ಅಪಹಾಸ್ಯದಿಂದ ಕ್ರೋಧಾವಿಷ್ಟನಾದ ಬಲಭದ್ರನು ಪರಿಘಾಯುಧದಿಂದ ರುಕ್ಮಿಯನ್ನು ಕೊಂದೇ ಬಿಟ್ಟನು. ಆಗ ಕಳಿಂಗ ರಾಜನು ಹೆದರಿ ಓಡಲಾರಂಭಿಸಿದನು. ರಾಮನು ಅವನನ್ನು ಹತ್ತೇ ಹೆಜ್ಜೆಗಳಲ್ಲಿ ಹಿಡಿದು, ನಗುವಾಗ ಅವನು ತೋರಿಸಿದ ಹಲ್ಲುಗಳನ್ನು ಗುದ್ದಿ ಉದುರಿಸಿದನು. ಇತರ ರಾಜರೂ ಪರಿಘಾಯುಧದ ಏಟಿನಿಂದಾಗಿ ತೋಳು, ತೊಡೆ, ತಲೆಗಳಿಂದ ರಕ್ತಹರಿಯುತ್ತಿರಲು ಅಲ್ಲಿಂದ ಪಲಾಯನ ಮಾಡಿದರು. ಶ್ರೀಕೃಷ್ಣನು ರುಕ್ಮಿಯ ವಧೆಯನ್ನು ಸರಿಯೆಂದಾಗಲೀ, ತಪ್ಪೆಂದಾಗಲೀ ಹೇಳದೆ ಸಮ್ಮನಿದ್ದನು. ಸರಿಯೆಂದರೆ ರುಕ್ಮಿಣಿಗೂ, ತಪ್ಪೆಂದರೆ ಬಲದೇವನಿಗೂ ಅಸಮಾಧಾನವಾಗುವುದೆಂದು ಅವನು ತಟಸ್ಥನಾಗಿರಲು ಕಾರಣ. ಇಷ್ಟೆಲ್ಲ ರಂಪವಾದ ಮೇಲೆ ಅವರೆಲ್ಲ ವಧೂ-ವರರೊಂದಿಗೆ ದ್ವಾರಕೆಗೆ ಹಿಂದಿರುಗಿದರು.

ಪ್ರಹ್ಲಾದನು ಶ್ರೀಮನ್ನಾರಾಯಣನ ಪರಮಭಕ್ತನಷ್ಟೆ? ಆದುದರಿಂದ ಮಹಾವಿಷ್ಣುವು ನೃಸಿಂಹ ರೂಪವನ್ನು ತಾಳಿ ಪ್ರಹ್ಲಾದನ ದುಷ್ಟ ತಂದೆಯಾದ ಹಿರಣ್ಯಕಶಿಪುವನ್ನು ಸಂಹರಿಸಿದನು. ಪ್ರಹ್ಲಾದನಿಗೆ ವಿರೋಚನನೆಂಬ ಮಗನಿದ್ದನು. ವಿರೋಚನನ ಮಗ ಬಲಿಚಕ್ರವರ್ತಿ. ಭಗವಂತನು ವಾಮನನಾಗಿ ಬಲಿಯಿಂದ ಮೂರು ಹೆಜ್ಜೆ ಭೂಮಿಯನ್ನು ಬೇಡಿ ಪಡೆದು ಅವನನ್ನು ಪಾತಾಳಕ್ಕೆ ತಳ್ಳಿದನು. ಬಲಿರಾಜನಿಗೆ ನೂರು ಮಂದಿ ಮಕ್ಕಳಿದ್ದರು. ಅವರಲ್ಲಿ ಹಿರಿಯವನೇ ಬಾಣಾಸುರ. ಬಾಣನು ಪರಮೇಶ್ವರನಾದ ಶಂಕರನ ಪರಮಭಕ್ತನು. ಅವನೂ ಬಲಿಯಂತೆ ದಾನಶೀಲ, ಮೇಧಾವಿ, ಸತ್ಯಸಂಧ, ವ್ರತನಿಷ್ಠ. ಅವನು ಆಳುತ್ತಿದ್ದದ್ದು ಸುಂದರವಾದ ಶೋಣಿತಪುರವನ್ನು. ಪರಶಿವನ ಅನುಗ್ರಹದಿಂದ ದೇವತೆಗಳೆಲ್ಲ ಅವನ ಸೇವಕರಂತಿದ್ದರು. ಅವನು ಸಹಸ್ರಬಾಹು. ಕೈಲಾಸಪತಿಯು ತಾಂಡವನೃತ್ಯ ಮಾಡುವಾಗ ಅವನು ತನ್ನ ಸಾವಿರ ಕೈಗಳಿಂದ ವಾದ್ಯಗಳನ್ನು ಬಾರಿಸಿ ಪರಮೇಶ್ವರನನ್ನು ಪ್ರಸನ್ನಗೊಳಿಸಿದ್ದನು. ಪ್ರಭುವು ಅವನಿಗೆ ವರ ಕೊಡಲು ಇಚ್ಛಿಸಿದಾಗ ಅವನು ತನ್ನ ಪುರವನ್ನು ಕಾಯುತ್ತಿರುವಂತೆ ಪ್ರಾರ್ಥಿಸಿಕೊಂಡನು. ಭಕ್ತಪರಾಧೀನನಾದ ಶಂಕರನು ಅವನ ರಾಜ್ಯವನ್ನು ರಕ್ಷಿಸುವ ಹೊಣೆಯನ್ನು ಹೊತ್ತು ಕೊಂಡನು.

ಒಂದು ದಿನ ಬಾಣನು ತನ್ನ ಕಿರೀಟಯುಕ್ತ ತಲೆಯನ್ನು ಭಗವಂತನ ಚರಣಕಮಲದ ಮೇಲಿಟ್ಟು ಹೇಳಿದನು, ಮಹಾದೇವ, ನೀನು ಸಮಸ್ತ ಲೋಕಗಳ ತಂದೆ. ಮಹೇಶ್ವರ, ಭಕ್ತರ ಕಾಮನೆಗಳನ್ನು ಪೂರೈಸುವ ಕಲ್ಪತರು ನೀನು. ಭಗವಂತ, ನೀನು ನನಗೆ ಸಾವಿರಕೈಗಳನ್ನು ಕರುಣಿಸಿರುವೆ. ಇವೆಲ್ಲ ನನಗೆ ಸುಮ್ಮನೆಭಾರ. ಯಾಕೆಂದರೆ ಯಾರೊಡನಾದರೂ ಯುದ್ಧ ಮಾಡೋಣವೆಂದರೆ ನನಗೆ ಸಮನಾದವರು ಯಾರೂ ಇಲ್ಲ, ನಿನ್ನೊಡನೆ ಯುದ್ಧ ಮಾಡೋಣವೆಂದರು ನೀನು ನನ್ನ ದೇವರು. ಈ ಬಾಹುಗಳಿಗೆ ನವೆಯಾಗುತ್ತಿದೆ. ಒಂದು ಸಲ ದಿಗ್ಗಜಗಳ ಸಂಗಡ ಸೆಣಸಲು ಹೋದೆ. ಆದರೆ ಆ ಬಡಪಾಯಿ ಪ್ರಾಣಿಗಳು ನನಗೆ ಹೆದರಿ ಓಡಿ ಬಿಡುವುದೇ?'' ಆಗ ಪರಮೇಶ್ವರನಿಗೆ ಕೋಪವೇ ಬಂದಿತು. ಅವನೆಂದನು, ''ಮುರ್ಖ, ಯಾವಾಗ ನಿನ್ನ ರಥದ ಧ್ವಜ ಮುರಿದು ಬೀಳುವುದೋ ಆಗ ನನಗೆ ಸಮನಾದವನೊಡನೆ ನಿನಗೆ ಸಮರವಾಗುವುದು. ಅವನಿಂದ ನಿನ್ನ ದರ್ಪಕ್ಕೆ ತಕ್ಕ ಶಾಸ್ತಿಯಾಗುವುದು''. ಇದನ್ನು ಕೇಳಿ ಆ ಮೂಢನಿಗೆ ಬಹಳ ಸಂತೋಷವೇ ಆಯಿತು. ತನ್ನ ದರ್ಪವನ್ನು ಮುರಿಯುವವನು ಯಾವಾಗ ಬರುವನೋ ಎಂದು ಕುತೂಹಲದಿಂದ ಕಾಯುತ್ತಿದ್ದನು.

ಈ ಬಾಣಾಸುರನಿಗೆ ಉಷೆ ಎಂಬ ಚೆಲುವೆಯಾದ ಮಗಳಿದ್ದಳು. ವಯಸ್ಸಿಗೆ ಬಂದ ಅವಳಿಗೆ ಒಂದು ದಿನ ಕನಸಿನಲ್ಲಿ ಪ್ರದ್ಯುಮ್ನನ ಮಗನಾದ ಅನಿರುದ್ಧನು ಕಾಣಿಸಿದನು. ಅವಳೆಂದೂ ಅವನನ್ನು ಕಂಡವಳಲ್ಲ. ಅವನ ಹೆಸರು, ಕುಲಗೋತ್ರಗಳೂ ಅವಳಿಗೆ ತಿಳಿದಿರಲಿಲ್ಲ. ಕನಸಿನಲ್ಲಿ ಅವನೊಡನೆ ಮಿಲನವಾಗುವಷ್ಟರಲ್ಲಿ ಅವನು ಮಾಯವಾದನು. ಅವಳು, ''ಎಲ್ಲಿದ್ದೀ ಪ್ರಾಣಕಾಂತ'' ಎಂದು ಕನವರಿಸುತ್ತ ಎಚ್ಚೆತ್ತಳು. ಸುತ್ತಲೂ ಸಖಿಯರಿರುವುದನ್ನು ನೋಡಿ ನಾಚಿ ನೀರಾದಳು. ಬಾಣನ ಕುಂಭಾಂಡನೆಂಬ ಮಂತ್ರಿಯ ಮಗಳಾದ ಚಿತ್ರಲೇಖೆಯು ಉಷೆಯ ಆಪ್ತಸಖಿ. ಅವಳು ಯೋಗಿನಿಯೂ, ಚಿತ್ರರಚನೆಯಲ್ಲಿ ಸಿದ್ಧಹಸ್ತಳೂ ಆಗಿದ್ದಳು. ಅವಳು ಉಷೆಯ ವಿಚಿತ್ರ ವರ್ತನೆಯನ್ನು ನೋಡಿ ಸಂಶಯದಿಂದ ಕೇಳಿದಳು, ''ಗೆಳತಿ, ನೀನಿನ್ನೂ ಅನೂಢೆ (ಅವಿವಾಹಿತೆ). ಯಾರಿಗಾಗಿ ಹಂಬಲಿಸುತ್ತಿರುವೆ? ನನ್ನಲ್ಲಿ ನಿನ್ನ ಮನಸ್ಸನ್ನು ಬಿಚ್ಚಿಡಬಾರದೇ?'' ಆಗ ಉಷೆ ಎಂದಳು, ''ಸಖಿ, ನಾನು ಕನಸಿನಲ್ಲಿ ಒಬ್ಬ ಅತ್ಯಂತ ಸುಂದರ ಯುವಕನನ್ನು ಕಂಡೆ. ಅವನು ಶ್ಯಾಮವರ್ಣದವನು ಮತ್ತು ಪೀತಾಂಬರಧಾರಿ. ನೋಡಿದರೆ ನೇರ ಹೃದಯದೊಳಗೇ ಹೋಗುವವನು. ಅವನು ಅವನ ತುಟಿಯ ಜೇನನ್ನು ನನಗೆ ಕುಡಿಸಿರುವನು. ಅವನನ್ನೇ ಬಯಸುತ್ತಿರುವ ನನ್ನನ್ನು ಬಿಟ್ಟು ಎಲ್ಲೊ ಮಾಯವಾಗಿ ಹೋದನು. ಅವನಿಗಾಗಿ ಹಂಬಲಿಸುತ್ತಿರುವೆನು''. ಚಿತ್ರಲೇಖೆ ಹೇಳಿದಳು, ''ಪ್ರಿಯ ಸಖಿ, ನೀನೊಪ್ಪುವುದಾದರೆ ಅವನು ಮೂರು ಲೋಕಗಳಲ್ಲಿ ಎಲ್ಲಿದ್ದರೂ ಅವನನ್ನು ತಂದು ನಿನ್ನ ಮುಂದೆ ನಿಲ್ಲಿಸುತ್ತೇನೆ.'' ಹೀಗೆಂದವಳೇ ಅವಳು ದೇವತೆಗಳ, ಗಂಧರ್ವರ, ಸಿದ್ಧರ, ಚಾರಣರ, ನಾಗರ, ದೈತ್ಯರ, ವಿದ್ಯಾಧರರ, ಯಕ್ಷರ, ಮನುಷ್ಯರ ಚಿತ್ರಗಳನ್ನು ಬಿಡಿಸಿ ತೋರಿಸಿದಳು. ಕೊನೆಗೆ ವೃಷ್ಣಿವಂಶೀಯರ ಚಿತ್ರಗಳನ್ನು ರಚಿಸಿದಳು. ಪ್ರದ್ಯುಮ್ನನನ್ನು ನೋಡಿ ನಾಚಿದಳು. ಅನಿರುದ್ಧನ ಚಿತ್ರವನ್ನು ಕಂಡು ಅರಳಿ ಬಿಟ್ಟಳು. ಅವನನ್ನೇ ಕನಸಿನಲ್ಲಿ ಕಂಡದ್ದೆಂದಳು. ಯೋಗಿನಿಯಾದ ಚಿತ್ರಲೇಖೆಗೆ ಅದು ಶ್ರೀಕೃಷ್ಣನ ಮೊಮ್ಮಗನಾದ ಅನಿರುದ್ಧನೆಂಬುದು ತಿಳಿಯಿತು. ಅವಳು ಯೋಗಶಕ್ತಿಯಿಂದ ಆಕಾಶ ಮಾರ್ಗವಾಗಿ ದ್ವಾರಕೆಗೆ ಹೋದಳು. ಅಲ್ಲಿ ಅಂತಃಪುರದಲ್ಲಿ ಗಾಢ ನಿದ್ರೆಯಲ್ಲಿದ್ದ ಅನಿರುದ್ಧನನ್ನು ಎತ್ತಿಕೊಂಡು ಉಷೆಯ ಅಂತಃಪುರಕ್ಕೆ ಬಂದಳು. ಉಷೆಯ ಅಂತಃಪುರ ಅತ್ಯಂತ ಸುರಕ್ಷಿತವಾಗಿತ್ತು. ಅದರೊಳಗೆ ಗಂಡಸರಿಗೆ ಪ್ರವೇಶವೇ ಇರಲಿಲ್ಲ. ಉಷೆಯು ಅನಿರುದ್ಧನೊಡನೆ ಪ್ರೇಮಸಂಗಮವನ್ನು ಪಡೆದಳು. ಯೋಗಿನಿಯ ಪ್ರಭಾವದಿಂದ ಅನಿರುದ್ಧನೂ ತನ್ನ ಬಂಧು ಬಳಗವನ್ನು ಮರೆತು ಉಷೆಯೊಡನೆ ಬೆರೆತನು. ಅವರಿಬ್ಬರೂ ಅಂತಃಪುರದಲ್ಲಿ ಸ್ವಚ್ಛಂದವಾಗಿ ವಿಹರಿಸಿದರು. ಹೀಗೆ ಎಷ್ಟು ಸಮಯ ಕಳೆಯಿತೆಂದು ಅವರಿಗೆ ಗೊತ್ತಾಗಲಿಲ್ಲ. ಉಷೆಯ ಕನ್ಯತ್ವವು ನಷ್ಟವಾಗಿತ್ತು. ಅವಳಲ್ಲಿ ಗರ್ಭಿಣಿಯ ಲಕ್ಷಣಗಳು ಸ್ಪಷ್ಟವಾಗುತ್ತಿದ್ದವು. ಅದನ್ನು ಗಮನಿಸಿದ ಕಾವಲು ಭಟರು ಬಾಣನಲ್ಲಿಗೆ ಹೋಗಿ ಅರಿಕೆ ಮಾಡಿಕೊಂಡರು, ''ಮಹಾರಾಜರೇ, ನಿಮ್ಮ ಮಗಳಿಂದ ಕುಲಗೌರವ ಹಾಳಾದಂತೆ ಕಾಣಿಸುತ್ತದೆ. ನಾವಂತು ನಿರಂತರ ಎಚ್ಚರದಿಂದ ಅಂತಃಪುರವನ್ನು ಕಾಯುತ್ತಿದ್ದೇವೆ. ಆದರೂ ಅವಳಿಗೆ ಪುರುಷಸಂಗವಾಗಿರುವಂತಿದೆ. ಇದೇ ನಮಗೆ ಆಶ್ಚರ್ಯ! (ಮುಂದುವರಿಯುವುದು)

## ಹೊಸ ಬೆಳಕು

**ನಲ್ನುಡಿ :**

ಸ್ವಸ್ತಿ ಪಂಥಾಮನುಚರೇಮ ।
ಶಂನೋಅಸ್ತು ದ್ವಿಪದೇಶಂಚತುಷ್ಪದೇ ॥

ಅಂದರೆ ಮಂಗಳಕರವಾದ ಮಾರ್ಗದಲ್ಲಿ ನಡೆಯೋಣ. ಮಾನವ ವರ್ಗಕ್ಕೆ ಮಾತ್ರವಲ್ಲದೆ ಸಕಲ ಜೀವರಾಶಿಗಳಿಗೂ ಶುಭವಾಗಲಿ

**ಪುಸ್ತಕ ಪರಿಚಯ :**

**ಡಾ| ಪಡುಬಿದ್ರಿ ವಿಠಲರಾಯರ 70ನೇ ವರ್ಷದ ಸಂಸ್ಮರಣೆ**

*ಸಂಪಾದಕರು : ವೈ.ಯಂ.ಶ್ರೀಧರ ರಾವ್*
*ಪ್ರಕಾಶಕರು : ಡಾ| ಯಂ. ವೆಂಕಪ್ಪಯ್ಯ*

ಈ ಕೃತಿಯ ಮುನ್ನುಡಿಯಲ್ಲಿ ಡಾ| ಭಾಸ್ಕರಾನಂದ ಕುಮಾರ್ ಇವರು ಹೀಗೆ ತಿಳಿಸುತ್ತಾರೆ ''ಡಾ| ಪಿ. ವಿಠಲ ರಾವ್ ಅವರು ವೈದ್ಯಕೀಯ ವೃತ್ತಿಯಲ್ಲಿದ್ದುಕೊಂಡು ಸಹಸ್ರಾರು ಮಂದಿಗೆ ಸಂತೋಷವನ್ನು ಕೊಟ್ಟರು. ವಿದ್ಯಾರ್ಥಿಗಳಿಗೆ ಆದರ್ಶವಾದರು. ಸಮಾಜಕ್ಕೆ ದಾರಿದೀಪವಾದವರು. ತನ್ನ ಆಚಾರದಿಂದಲೇ ಆದರ್ಶವನ್ನು ಬೋಧಿಸಿದ ಇವರಿಗೆ ಇಂದು ಎಪ್ಪತ್ತರ ವಯಸು. ಇದನ್ನು ಗುರುತಿಸಿ ಶ್ರೀಯುತ ವೈ.ಎಮ್.ಶ್ರೀಧರ ರಾಯರು ಸಣ್ಣ ಪುಸ್ತಕವನ್ನು ಹೊರತರುತ್ತಿದ್ದಾರೆ ಎಂಬುದು ಸುತ್ತ್ಯಾರ್ಹವೂ ಸ್ವಾಗತಾರ್ಹವೂ ಆಗಿದೆ''.

ಈ ಕೃತಿಯ ಸಂಪಾದಕರಾದ ವೈ.ಎಂ. ಶ್ರೀಧರ ರಾವ್ ಹೀಗೆ ತಿಳಿಸುತ್ತಾರೆ ''ಪಡುಬಿದ್ರಿ ದುರ್ಗಿಮನೆ-ನಿವೃತ್ತ ಶಿಕ್ಷಕ ದಿ| ಸದಾಶಿವ ರಾವ್ ಮತ್ತು ಭಾಗೀರಥಿಯವರ 2 ಹೆಣ್ಣು ಮತ್ತು 3 ಗಂಡು ಮಕ್ಕಳಲ್ಲಿ 4ನೇಯವರು ಹಾಗೂ 2ನೇಯ ಪುತ್ರರಾದ ಡಾ|ಪಿ. ವಿಠಲ ರಾಯರು ತನ್ನ 70ನೇ ವರ್ಷಪ್ರಾಯದಲ್ಲಿ ಆಚರಿಸುವ ''ಭೀಮರಥಿ ಶಾಂತಿ'' ಹಾಗೂ ಚಂಡಿಕಾ ಹೋಮ ಸಮಾರಂಭದ ಸುಸಂದರ್ಭದಲ್ಲಿ..... ಆತ್ಮ ಸಂತೋಷದಿಂದ ಬರೆದ ಕಿರು ಲೇಖನ. ಈ ಕೃತಿಯನ್ನು ಡಾ| ಪಿ.ವಿಠಲರಾಯರ ಮಾತಾಪಿತರಾದ ದಿ| ಭಾಗೀರಥಿ ಮತ್ತು ದಿ| ಸದಾಶಿವ ರಾವ್ ಇವರ ಪರಮ ಪೂಜ್ಯ ಚರಣಾರವಿಂದಗಳಿಗೆ ಸಮರ್ಪಿಸಲು ತುಂಬಾ ಸಂತೋಷಪಡುತ್ತೇನೆ.''

ಈ ಕೃತಿಯ ಪ್ರಕಾಶಕರಾದ ಡಾ| ಯಂ ವೆಂಕಪ್ಪಯ್ಯ ಹೀಗೆ ತಿಳಿಸಿದ್ದಾರೆ. ''ಈ ಸಂದರ್ಭದಲ್ಲಿ ಭಾವ ಶ್ರೀಧರರಾಯರಿಗೆ ನನ್ನ ಕೃತಜ್ಞತೆಯನ್ನು ಸೂಚಿಸುತ್ತಾ ನನ್ನ ತಂದೆಯವರ ತಂಗಿ ಸೀತಮ್ಮ ಮತ್ತು ಇನ್ನ ಕೇದಿಗೆ ಲಕ್ಷ್ಮೀನಾರಾಯಣರಾಯರ ಮಗ ಊಟಿ ಕೃಷ್ಣರಾಯರೆಂದೇ ಪ್ರಖ್ಯಾತರಾದವರ ಮಗಳು ಡಾ| ರವಿಕಲಾಳನ್ನು ಮದುವೆಯಾದ ಅತ್ಯಂತ ಸೌಮ್ಯ ಮೂರ್ತಿ, ಜನಾನುರಾಗಿ, ಎಲ್ಲರ ಅಭಿಮಾನಿ ಡಾ| ಪಿ.ವಿಠಲರಾಯರ 70ನೇ ವರ್ಷದ ಶಾಂತಿ, ಹೋಮ, ಆರಾಧನೆ, ದೇವತಾಕಾರ್ಯಗಳೆಲ್ಲ ಭಗವಂತನ ಇಚ್ಛೆಯಂತೆ-ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವರ ದಿವ್ಯಸನ್ನಿಧಿಯಲ್ಲಿ ತಾ.20-11-2011ನೇ ರವಿವಾರ ಜರಗುವ ಅತ್ಯಂತ ಪುಣ್ಯ ಕಾರ್ಯದಲ್ಲಿ ಪ್ರವೃತ್ತರಾದ ವಿಠಲ ರಾವ್ ದಂಪತಿಗಳಿಗೂ ಅವರ ಚಿರಂಜೀವಿಗಳಿಗೂ... ಭಗವಂತನು ಅನುಗ್ರಹಿಸಿ, ಕಾಪಾಡಲಿ! ಎಂದು ಮನಸಾರೆ ಪ್ರಾರ್ಥಿಸುತ್ತಾ ನನ್ನ ಅಂತರಾಳದ ಮಾತನ್ನು ಕೊನೆಗೊಳಿಸುವೆನು''

ಈ ಕೃತಿಯಲ್ಲಿ ಡಾ| ವಿಠಲ ರಾಯರ ಅಭಿಮಾನಿಗಳಾದ ಮುಂಡ್ಕೂರು ಪಾಲಚಂದ್ರರಾವ್, ಪಾವಂಜೆ ಕೋಡಿಮನೆ ಡಾ| ಯಾಜಿ ನಿರಂಜನ ಭಟ್, ಮುಲ್ಕಿ-ಬಪ್ಪನಾಡಿನ ಹಾಗೂ ಈಗ ಮಣಿಪಾಲದಲ್ಲಿರುವ ಡಾ| ಬಿ.ಹೆಚ್ ಆನಂದರಾವ್ ಉಡುಪಿ, ಚಿಟ್ಪಾಡಿ ಸಿ.ಯಸ್.ರಾವ್, ಹಿರಿಯ ಆಶುಕವಿ ವೈ.ಎ.ರಾವ್ ಇವರು ತಮ್ಮ ಸದಭಿಪ್ರಾಯವನ್ನು ನೀಡಿದ್ದಾರೆ. ಆ.ಶಾ.ಕೊ.ಇವರಿಂದ ಶ್ರೇಯಃ ಪ್ರಾರ್ಥನೆಯಿದೆ.

ಡಾ| ಪಿ.ವಿಠಲರಾಯರದ್ದು ಒಂದು ಆಕರ್ಷಣೀಯ ವ್ಯಕ್ತಿತ್ವ, ಐಶಾರಾಮ ಬದುಕಿಗೆ ಗಂಟು ಬೀಳದೆ ಮಾನವೀಯ ಮಟ್ಟದ ಆದರ್ಶಗಳನ್ನು ಪಾಲಿಸುತ್ತಾ ದೇವರಲ್ಲಿ ಭಕ್ತಿ, ಹಿರಿಯರಲ್ಲಿ ಗೌರವ, ಸಕಲ ಜೀವ ರಾಶಿಗಳ ಮೇಲೆ ಪ್ರೇಮವನ್ನು ಸದಾ ನೆನಪಿಸಿಕೊಂಡು ತನ್ನ ಸರಳ, ಹೃದಯವಂತಿಕೆಯ ಜೀವನದಲ್ಲಿ ಬದುಕಿಗೊಂದು ಅರ್ಥವಿದೆ ಎಂಬುದನ್ನು ಸಾಕ್ಷಾತ್ಕಾರಗೊಳಿಸಿದವರಾಗಿದ್ದಾರೆ ಎಂದು ಮುಂಡ್ಕೂರು ಪಾಲಚಂದ್ರರಾವ್ ಅಭಿಪ್ರಾಯಪಟ್ಟಿದ್ದಾರೆ.

ಉಡುಪಿಯ ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಉಡುಪಿ ಇದರ ಅಧ್ಯಕ್ಷರಾಗಿಯೂ ಉಡುಪಿಯ ಶ್ರೀಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯ ಅಧ್ಯಕ್ಷರಾಗಿಯೂ, ಶ್ರೀಶಾರದಾ ಪತ್ರಿಕೆಯ ಮಹಾಪೋಷಕರಾಗಿಯೂ, ಲಯನ್ಸ್ ಕ್ಲಬ್ ಉಡುಪಿ ವೈನ್ಸ್ ಇದರ ಅಧ್ಯಕ್ಷರಾಗಿಯೂ ಮತ್ತು ಇನ್ನಿತರ ಅನೇಕ ಸಂಘ-ಸಂಸ್ಥೆಗಳಲ್ಲಿ ಪದಾಧಿಕಾರಿಗಳಾಗಿಯೂ ತಮ್ಮನ್ನು ತೊಡಗಿಸಿಕೊಂಡು ಯಶಸನ್ನು ಕಂಡ ಡಾ| ಪಿ.ವಿಠಲ ರಾವ್ ಅವರಿಗೆ ಈ ಸಂದರ್ಭದಲ್ಲಿ ಶುಭ ಹಾರೈಕೆಗಳು.

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ| ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ| ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ| ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ| ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ| ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ.

## ಶ್ರೀಶಾರದಾ ದೇವಸ್ಥಾನದಲ್ಲಿ ಸಾಮೂಹಿಕ ಚಂಡಿಕಾಹೋಮ-ಯಕ್ಷಗಾನ

(...3ನೇ ಪುಟದಿಂದ)

ಸಹಸ್ರ ನಾಮ ಪಠಣ, ಶ್ರೀದೇವಿಯ ಭಜನೆಯನ್ನು ಶ್ರೀದೇವಸ್ಥಾನದಲ್ಲಿ ನಡೆಸಿದರು. ಯಾಗ ಕರ್ತೃ ಗಳಾಗಿ ಶ್ರೀ ಟಿ.ಎನ್.ಶ್ಯಾನುಭಾಗ್ ದಂಪತಿ ಗಳು ಭಾಗಹಿಸಿದ್ದರು. ಸುಮಾರು 400ಕ್ಕೂ ಮಿಕ್ಕಿದ ಭಕ್ತರು ಚಂಡಿಕಾಯಾಗದಲ್ಲಿ ಪಾಲ್ಗೊಂಡು ಭೋಜನ ಪ್ರಸಾದ ಸ್ವೀಕರಿಸಿ ದರು.

ಚಂಡಿಕಾಯಾಗ ನಡೆಸಲು ತಗಡಿನ ಚಪ್ಪರ, ಶ್ಯಾಮಿಯಾನ ಉಚಿತವಾಗಿ ನೀಡಿದ ಹೆಬ್ಬಾರ್ ಎಂಟರ್‌ಪ್ರೈಸಸ್‌ನ ಮಾಲಕರಿಗೆ, ಯಾಗಕರ್ತೃ ಗಳಾದ ಶ್ರೀ ಟಿ.ಎನ್.ಶ್ಯಾನುಭಾಗ ದಂಪತಿ




ಗಳಿಗೆ, ಯಾಗದಲ್ಲಿ ಭಾಗವಹಿಸಿದ ಎಲ್ಲಾ ಭಕ್ತರಿಗೆ, ಯಾಗವನ್ನು ವಿಧಿ ಪ್ರಕಾರ ನೆರವೇರಿಸಿದ ಋತ್ವಿಕ್ಕರು ಶ್ರೀ ನಾಗಭೂಷಣ ಶಾಸ್ತ್ರಿ ಹಾಗೂ ಅವರೊಂದಿಗೆ ಭಾಗವಹಿಸಿದ ಋತ್ವಿಜರಿಗೆ, ಸಂಘದ ಮಹಿಳಾ ವೇದಿಕೆ, ಯುವವೇದಿಕೆ ಹಾಗೂ ಇತರ ವೇದಿಕೆಗಳ ಅಧ್ಯಕ್ಷರು, ಸಂಚಾಲಕರು, ಸದಸ್ಯರುಗಳಿಗೆ ಕೃತಜ್ಞತೆಗಳನ್ನು ಕಾರ್ಯದರ್ಶಿಯವರು ಸಂಘದ ಪರವಾಗಿ ನೀಡಿದ್ದಾರೆ.

**ಯಕ್ಷಗಾನ-ಪ್ರಮಿಳಾರ್ಜುನ-ಘೋರ ಭೀಷಣ ಕಾಳಗ-ವೀರ ಬಬ್ರುವಾಹನ :**

ಅದೇ ದಿನ ಸಂಜೆ 7 ಗಂಟೆ ಸುಮಾರಿಗೆ ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು ಕುಂಜಿಬೆಟ್ಟು ಉಡುಪಿ ಇವರಿಂದ ಪ್ರಮಿಳಾರ್ಜುನ-ಘೋರಭೀಷಣ ಕಾಳಗ- ವೀರ ಬಬ್ರುವಾಹನ ಎಂಬ 3 ಗಂಟೆ ಅವಧಿಯ ಯಕ್ಷಗಾನ ಬಯಲಾಟವು ಪ್ರದರ್ಶಿಸಲ್ಪಟ್ಟಿತು. ಸುಮಾರು 5 ವರ್ಷಗಳಿಂದ ಶ್ರೀಶಾರದಾ ಹವ್ಯಾಸಿ ಯಕ್ಷಗಾನವನ್ನು ಪ್ರದರ್ಶಿಸಿ ಜನರ ಮೆಚ್ಚುಗೆಯನ್ನು ಪಡೆದಿದೆ.

ಯಕ್ಷಗಾನದಲ್ಲಿ ಭಾಗವತರಾಗಿ ನಮ್ಮ ಸಮಾಜದ ಯುವ ಕಲಾವಿದರಾದ ಶ್ರೀ ಚಂದ್ರಕಾಂತ ರಾವ್, ಮೂಡುಬೆಳ್ಳೆ ಹಾಗೂ ಪ್ರವೀಣಕುಮಾರ್ ಕುಕ್ಕಿಕಟ್ಟೆ ಮದ್ದಳೆಗಾರರಾಗಿ ಶ್ರೀ ರತ್ನಾಕರ ಶೆಣೈ ಉಡುಪಿ, ಚೆಂಡೆಯಲ್ಲಿ ರತ್ನಾಕರ ಆಚಾರ್ ಉಡುಪಿ ಸಹಕರಿಸಿದರು.

ಪಾತ್ರವರ್ಗ : ಬಾಲಗೋಪಾಲರಾಗಿ ಕು। ವೈಷ್ಣವಿ ಹೆಬ್ಬಾರ್ ಮತ್ತು ಗೌತಮಿ ರಾವ್ ಕೆ. ; ಪೀಠಿಕಾ ಸ್ತ್ರೀವೇಷ-ಕು। ಪ್ರಿಯ ಹಾಗೂ ಅಶ್ವಿನಿ ಶಾಸ್ತ್ರಿ; ಪ್ರಾರ್ಥನೆ (ಕೋಡಂಗಿ)- ಕು। ಪಲ್ಲವಿ, ಕು। ಪ್ರೇರಣ, ಮಾ। ಆದಿತ್ಯರಾವ್; ಅರ್ಜುನ- ಟಿ.ವಾಗೀಶರಾವ್ ನಿಟ್ಟೂರು; ವೃಷಕೇತು- ಅಜಿತ್‌ರಾವ್ ಬೈಲೂರು; ಪ್ರದ್ಯುಮ್ನ- ಟಿ.ಸ್ವಾತಿರಾವ್; ಕೃತವರ್ಮ- ಕಾರ್ತಿಕ್ ಸಿ.; ಸಾತ್ಯಕಿ-ನಿಹಾಲ್; ದೂತ- ಕಾರ್ತಿಕ್ ಕೆ.; ಧೂತಿ- ಪ್ರಿಯಾರಾವ್; ಪ್ರಮೀಳೆ-ಸುಮನಾ ಕನ್ನರ್ಪಾಡಿ; ಮೇಧೋಪೋತ- ಯು.ಅರವಿಂದ ಕುಮಾರ್; ಘೋರ ಭೀಷಣ- ಟಿ.ವಿಶ್ವನಾಥ ಶ್ಯಾನುಭಾಗ್; ಲಂಬೋಧರಿ-ಸಂತೋಷರಾವ್; ಬಾರ್ಕೂರು ಯೋಜನ ಸ್ತನಿ-ಕೆ.ವಾಗೀಶ ರಾವ್ ಕಲ್ಮಂಜೆ; ಹನುಮಂತ- ಪವನಕುಮಾರ್; ಕುದುರೆ ದಿಟ-ಕಾರ್ತಿಕ್‌ಕೆ.; ಬಬ್ರುವಾಹನ 1-ಗೌತಮಿ ರಾವ್ ಕೆ.; ಮಂತ್ರಿ-ವಾಗೀಶರಾವ್, ಕಲ್ಮಂಜೆ; ಧೂತ- ಕೆ.ವ್ಯಾಸರಾವ್ ಕಲ್ಮಂಜೆ; ಕಟಕಿ-ಅಶ್ವಿನಿ ಶಾಸ್ತ್ರಿ; ಚಿತ್ರಾಂಗದೆ-ವೃಂದಾ ಕೆ.ರಾವ್; ಸಭಾ ಅರ್ಜುನ-ಕೃಷ್ಣಕುಮಾರ್‌ರಾವ್ ಮಟ್ಟು; ಬಬ್ರುವಾಹನ 2-ಅನುಶ್ರೀ; ಮಹಾಶೇಷ- ಅರವಿಂದಕುಮಾರ್; ಶ್ರೀಕೃಷ್ಣ-ವೈಷ್ಣವಿ ಹೆಬ್ಬಾರ್; ಕುದುರೆಯಾಗಿ-ಪಲ್ಲವಿ ಹಾಗೂ ಪ್ರೇರಣ.

ಈ ಯಕ್ಷಗಾನದ ನಿರ್ದೇಶಕರು ಶ್ರೀ ಮಂಜುನಾಥ ಕುಲಾಲ್, ಗುರುಗಳು, ಯಕ್ಷಗಾನ ಕೇಂದ್ರ, ಉಡುಪಿ ಹಾಗೂ ವೇಷಭೂಷಣ- ಬ್ರಹ್ಮಲಿಂಗೇಶ್ವರ ಯಕ್ಷಗಾನ ಮಂಡಳಿ ಬಾರ್ಕೂರು ಇವರೊಡನೆ ನಮ್ಮವರೇ ಆದ ಶ್ರೀ ಬಿ.ಕೃಷ್ಣಮೂರ್ತಿ ರಾವ್ ಸಹಕರಿಸಿದ್ದರು. ಯಕ್ಷಗಾನದ ಯಶಸಿಗೆ ಸಹಕರಿಸಿದ ನಮ್ಮ ಸಂಘದ ಆಡಳಿತ ಮಂಡಳಿ ಹಾಗೂ ಸರ್ವ ಸದಸ್ಯರು, ಯಕ್ಷಗಾನ ಕೇಂದ್ರ ಕುಂಜಿಬೆಟ್ಟು, ಪ್ರೇಕ್ಷಕವರ್ಗ ಹಾಗೂ ಪ್ರಾಯೋಜಕರಾಗಿ ಸಹಕರಿಸಿದ ಎಲ್ಲರಿಗೂ ಶ್ರೀಶಾರದಾ ಹವ್ಯಾಸಿ ಕಲಾವಿದರು ಕೃತಜ್ಞತೆ ಸಲ್ಲಿಸಿದ್ದಾರೆ.

**-ಅರವಿಂದಕುಮಾರ್**

## ಗಂಗಾವತಿ : ನಂದಳಿಕೆ ಬಾಲಚಂದ್ರರಾಯರಿಗ ಸನ್ಮಾನ



ಗ್ರಾಮೀಣ ಅಭಿವೃದ್ಧಿ ನಾಡುನುಡಿಗೆ ವಿಶೇಷ ಸೇವೆ ಸಲ್ಲಿಸಿ ಮುದ್ದಣನ ಸಮಗ್ರ ಕೃತಿಗಳನ್ನು ಪುನರ್ ಮುದ್ರಣಗೊಳಿಸಿದ ಮುದ್ದಣ ಪ್ರಕಾಶನದ ಗೌರವ ನಿರ್ದೇಶಕ ಶ್ರೀ ನಂದಳಿಕೆ ಬಾಲಚಂದ್ರರಾವ್ ಅವರನ್ನು ತಾ.11-12-2011ರಂದು ಗಂಗಾವತಿಯಲ್ಲಿ ಜರಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನಿಸಿದ ಕಾರ್ಯಕ್ರಮದಲ್ಲಿ ಅಧ್ಯಕ್ಷ ಶ್ರೀ ಸಿ.ಪಿ.ಕೆ. ಕೃಷ್ಣಕುಮಾರ್, ಪೂಜ್ಯಶ್ರೀ ಸಾಣೆಹಳ್ಳಿ ಸ್ವಾಮೀಜಿ, ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಮ್.ಎಸ್.ಕೃಷ್ಣಯ್ಯ, ಎಸ್.ಎಲ್.ಭೈರಪ್ಪ ಮುಂತಾದವರನ್ನು ಕಾಣಬಹುದು.

## ಸಹಸ್ರಚಂದ್ರದರ್ಶನ ಶಾಂತಿ



ತಾ.27-12-2011ನೇ ಮಂಗಳವಾರದಂದು ನಮ್ಮ ತೀರ್ಥರೂಪರಾದ

### ಶ್ರೀ ಅಲೆವೂರು ಶ್ರೀನಿವಾಸ ರಾವ್

(ದಿ। ಅಲೆವೂರು ಸುಬ್ಬರಾವ್‌ರವರ ಹಿರಿಯ ಪುತ್ರ)

ಇವರಿಗೆ **ಸಹಸ್ರ ಚಂದ್ರದರ್ಶನ ಶಾಂತಿ ಮಹೋತ್ಸವವವನ್ನು**

ಶ್ರೀ ಗುರುದೇವತಾನುಗ್ರಹದಿಂದ ಉಡುಪಿ ರಥಬೀದಿಯಲ್ಲಿರುವ ಶ್ರೀ ರಾಘವೇಂದ್ರಸ್ವಾಮಿ ಮಠದಲ್ಲಿ ನೆರವೇರಿಸಿದ

ಈ ಶುಭ ಸಮಾರಂಭಕ್ಕೆ ಆಗಮಿಸಿದ ತಮಗೆಲ್ಲರಿಗೂ ಹಾರ್ದಿಕ ಶುಭಾಶಯಗಳು

**ಶ್ರೀಮತಿ ಶೋಭಾ ಮತ್ತು ಶ್ರೀ ನಟರಾಜ್**
**ಶ್ರೀಮತಿ ಉಷಾಲತ ಮತ್ತು ಶ್ರೀ ಜ್ಞಾನೇಶ್ವರ ರಾವ್**
**ಶ್ರೀಮತಿ ಬಬಿತಾ ಮತ್ತು ಶ್ರೀ ಅಣ್ಣಾಜಿ ರಾವ್**
**ಶ್ರೀಮತಿ ವಿದ್ಯಾ ಮತ್ತು ಶ್ರೀ ಕಿಶೋರ್ ರಾವ್**
**ಶ್ರೀಮತಿ ಮಮತ ಮತ್ತು ಶ್ರೀ ಚಂದ್ರಹಾಸ**
**ಹಾಗೂ ಮೊಮ್ಮಕ್ಕಳು, ಮರಿಮಕ್ಕಳು**

# ಶ್ರೀಶಾರದಾ ವೇದಿಕೆಯ ಮಹಾಪೋಷಕರಾಗಿ ಶ್ರೀ ವೈ.ಶಂಕರನಾರಾಯಣ ರಾವ್

ಶ್ರೀ ವೈ. ಶಂಕರನಾರಾಯಣ ರಾವ್ ಅವರು ನಮ್ಮ ಪತ್ರಿಕೆಯ ಓದುಗರಿಗೆ ಚಿರ ಪರಿಚಿತ ಲೇಖಕರು. ಶ್ರೀಯುತರು ನಮ್ಮ ಪತ್ರಿಕೆ ಪ್ರಾರಂಭಗೊಂಡ ಸಮಯದಿಂದಲೂ ನಿರಂತರವಾಗಿ ಬರೆಯುತ್ತಿದ್ದು ಪತ್ರಿಕೆಯ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆಯನ್ನು ಸಲ್ಲಿಸುತ್ತಿದ್ದಾರೆ. ಇವರ ನಲ್ವತ್ತಕ್ಕಿಂತಲೂ ಹೆಚ್ಚಿನ ವೈವಿಧ್ಯಮಯ ಬರಹಗಳು ಪತ್ರಿಕೆಯಲ್ಲಿ ಪ್ರಕಟವಾಗಿದ್ದು ಓದುಗರ ಮೆಚ್ಚುಗೆ ಗಳಿಸಿವೆ. ಈಗ ನಮ್ಮ ಪತ್ರಿಕೆಯ ಮಹಾಪೋಷಕರಾಗಿಯೂ ಗುರುತಿಸಿಕೊಂಡಿದ್ದಾರೆಂದು ಪ್ರಕಟಿಸಲು ಸಂತೋಷಪಡುತ್ತೇವೆ.

ಇವರು ಎಲ್ಲೂರು ಕಾಶೀ ಸಂತಾನ ಕುಟುಂಬದ 5ನೇ ಕವಲಿನ ದಿ। ವೈ.ರಾಮಕೃಷ್ಣಯ್ಯ-ನಾಗವೇಣಿ ದಂಪತಿಯ 9 ಮಕ್ಕಳಲ್ಲಿ 4ನೇಯವರು (ಪ್ರಥಮ ಪುತ್ರರು). ಉಡುಪಿ ತಾಲೂಕಿನ ಮಟ್ಟು ಗ್ರಾಮದಲ್ಲಿ ತನ್ನ ಸೋದರಮಾವ ನಾರಾಯಣ ರಾಯರ-ಮಟ್ಟು ಕೃಷ್ಣಕುಮಾರ್ ಈಗ ಇರುವ ಮನೆಯಲ್ಲಿ 24-6-1944ರಂದು ಜನಿಸಿದ ಇವರಿಗೆ ಈಗ 68ರ ಮಾಗಿದ ಹರೆಯ. ತಮ್ಮ ಪ್ರಾಥಮಿಕ ಶಿಕ್ಷಣವನ್ನು ಬಜಪೆಯಲ್ಲಿಯೂ, ಹೈಸ್ಕೂಲ್ ಶಿಕ್ಷಣವನ್ನು ಕಾರ್ಕಳದ ಬೋರ್ಡ್ ಹೈಸ್ಕೂಲಿನಲ್ಲಿಯೂ ಮುಗಿಸಿದರು. 1961ರಲ್ಲಿ ಎಸ್‌ಎಸ್‌ಎಲ್‌ಸಿ (ಆಗಿನ 11ನೇ ತರಗತಿ) ಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದರೂ ಬಡತನದ ದೆಸೆಯಿಂದ ಶಿಕ್ಷಣವನ್ನು ಮುಂದುವರಿಸಲಾಗಲಿಲ್ಲ. ಕಡು ಬಡತನದಲ್ಲಿದ್ದ ಆ ಸಮಯದಲ್ಲಿ ಖಾಸಗೀ ವಲಯ ದಲ್ಲಿದ್ದ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಕ್ಲರ್ಕ್ ಕೆಲಸ ಕೊಡಿಸಿ ತನ್ನ ಕೈಹಿಡಿದು ಮೇಲಕ್ಕೆತ್ತಿದವರು ಅಂಬಲ್ಪಾಡಿ ಕೃಷ್ಣರಾಯರು ಎನ್ನುತ್ತಾರೆ ಶ್ರೀ ಶಂಕರನಾರಾಯಣ ರಾವ್ ಅವರು. ತನಗೆ 18ರ ಪ್ರಾಯದಲ್ಲಿ ಪ್ರಾಪ್ತವಾದ ಈ ಬ್ಯಾಂಕ್ ಉದ್ಯೋಗದಿಂದಲೇ ತನ್ನ 5 ಜನ ಕಿರಿಯ ಸಹೋದರ-ಸಹೋದರಿಯರನ್ನು ದಡ




ಸೇರಿಸಲು ಸಾಧ್ಯವಾಯಿತು ಹಾಗೂ ಸಂಕಷ್ಟ ಸಂದರ್ಭಗಳಲ್ಲಿ ಇಬ್ಬರು ಹಿರಿಯ ಸಹೋದರಿಯರ ಸಂಸಾರಕ್ಕೂ ನೆರವಾಗುವಂತಾಯಿತು ಎಂದು ಸ್ಮರಿಸಿಕೊಳ್ಳುತ್ತಾರೆ ಶ್ರೀ ರಾವ್ ಅವರು.

ಬ್ಯಾಂಕಿನಲ್ಲಿ ಕ್ರಮೇಣ ಪದೋನ್ನತಿಗೊಂಡು ಇವರು ಅಧಿಕಾರಿಗಳಾಗಿ ವಿವಿಧ ಶಾಖೆಗಳಲ್ಲಿ ಹಲವು ಹುದ್ದೆಗಳನ್ನು ನಿಭಾಯಿಸಿದರು. ಅಲ್ಲದೆ ಆಡಳಿತ ಕಛೇರಿಗಳಲ್ಲಿ ಪರಿವೀಕ್ಷಣ ಅಧಿಕಾರಿ, ಮುಂಗಡ ಅಧಿಕಾರಿ, ವಸೂಲಾತಿ ಅಧಿಕಾರಿಯಾಗಿಯೂ ಸೇವೆ ಸಲ್ಲಿಸಿದ ಅನುಭವ ಇವರಿಗಿದೆ. ಸುಮಾರು 36 ವರ್ಷಗಳಿಗೆ ಮೇಲ್ಪಟ್ಟ ಸೇವೆ ಸಲ್ಲಿಸಿ ಇನ್ನು ಸಾಕೆನಿಸಿದಾಗ 1998ರಲ್ಲಿ ಸ್ವಯಂ ನಿವೃತ್ತಿ ಪಡೆದುಕೊಂಡು ಪಿಂಚಣಿ ಪಡೆಯುತ್ತಾ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ.

ಸದ್ಯ ಇವರು ಮೌಲಿಕ, ವೈಚಾರಿಕ, ಸತ್ವಯುತ ಸಾಹಿತ್ಯದ ಸ್ವಾಧ್ಯಾಯನದಲ್ಲಿ ನಿರತರು. ''ಶ್ರೀಶಾರದಾ ಮಾತೆ ಸ್ಫೂರ್ತಿಯನ್ನಿತ್ತು ಬರೆಸಿದರೆ ನನ್ನ ಅನಾರೋಗ್ಯದ ನಡುವೆಯೂ ನಮ್ಮ ಪತ್ರಿಕೆಗೆ ಇದೇ ರೀತಿ ಬರೆಯುತ್ತಿರುತ್ತೇನೆ'' ಎನ್ನುತ್ತಾರೆ. ಪಡುಬಿದ್ರಿಯ ದಿ।ದೇವರಾವ್ ಅವರ ಪುತ್ರಿ ಪುಷ್ಪರಾವ್ ಅವರನ್ನು 1976ರಲ್ಲಿ ವಿವಾಹವಾಗಿರುವ ಈ ದಂಪತಿಗೆ ಇಬ್ಬರು ಮಕ್ಕಳು. ಉಡುಪಿಯ Style Spa Furniture ಸಂಸ್ಥೆಯಲ್ಲಿ ಉದ್ಯೋಗಿಯಾಗಿರುವ ಶ್ರೀ ವಿನಯರಾವ್ ಇವರ ಪುತ್ರ. USAದಲ್ಲಿ MDಪದವಿಯನ್ನು ಪಡೆದು ಪ್ರಸೂತಿ ಮತ್ತು ಸ್ತ್ರೀ ಸ್ವಾಸ್ಥ್ಯ ತಜ್ಞೆಯಾಗಿರುವ ಪುತ್ರಿ ಡಾ। ಸುಪ್ರಿಯಾ ನಾಗರಾಜ್ ಅಂಟ್ಲಾಂಟ (USA)ದಲ್ಲಿ ನೆಲೆಸಿದ್ದಾರೆ. ಶ್ರೇಯಾ ಮತ್ತು ಪ್ರಥಮ್ ಎಂಬ ಪುಟಾಣಿಗಳು ಇವರ ಮೊಮ್ಮಕ್ಕಳು.

ತನ್ನ ಈ ಎಲ್ಲಾ ಸಾಧನೆಗಳ ಹಿಂದೆ ಪ್ರೇರಕ ಶಕ್ತಿಯಾಗಿ ಬಾಳಿನ ದಾರಿದೀಪವಾಗಿ ಮುನ್ನಡೆಸಿದವರು ಶ್ರೀ ಅಂಬಲ್ಪಾಡಿ ಕೃಷ್ಣ ರಾಯರು ಎಂದು ಕೃತಜ್ಞತೆಯಿಂದ ಅವರನ್ನು ಸ್ಮರಿಸಿಕೊಂಡಿದ್ದಾರೆ. □

# ಕನ್ನಡ ಕವಿಕಾವ್ಯ ಪರಿಚಯ-೩ : ವರಕವಿ ಮುದ್ದಣ



- ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.

ತುಳುನಾಡಿನ ಕಾವ್ಯವೆಂಬ ಆಕಾಶದಲ್ಲಿ ಉದಯಾಚಲಕ್ಕೆ ಬರುತ್ತಿರುವ ತರುಣ ಭಾಸ್ಕರನೂ, ಹೊಸಗನ್ನಡ ಕಾವ್ಯಾರಾಮದಲ್ಲಿ ಮೊದಲು ಕೂಗಿದ ಕೋಗಿಲೆಯೂ, ಕರ್ಣಾಟಕ ಕವಿಗಳೆಂಬ ಮಾವಿನ ತೋಪನ್ನು ದಾಟಿ ಷಡಕ್ಷರಿಯ ಕಾವ್ಯಮೇರುವನ್ನು ಮುಟ್ಟಿದ ಪಂಡಿತ ಮಹನೀಯನೂ, ಕನ್ನಡ ದೇವಿಯ ದೇವಾಲಯದ ಹೊರಸುತ್ತಿನಲ್ಲಿಯೇ ನಿಂತು ಕೇವಲ ಯಕ್ಷಗಾನ ಸೇವೆಯನ್ನು ಮಾಡುವ ಭಾಗವತನಾಗಿರದೆ ಆ ಸರಸ್ವತಿಯ ದೇಗುಲದ ಗರ್ಭಗುಡಿಯನ್ನು ಸೇರಿ ಅರ್ಚನೆಯನ್ನು ಕೈಗೊಂಡ ಶುದ್ಧೋಪಾಸಕನೂ, ಪುರಾತನ-ನೂತನ ಮಾರ್ಗದ್ವಯ ಸಮನ್ವಯಾಚಾರ್ಯನೂ, ರಾಮಾಶ್ವಮೇಧವೆಂಬ ಸಾಮಾನ್ಯ ಕಥಾಚಿತ್ರಕ್ಕೆ ಮುದ್ದಣ-ಮನೋರಮೆಯರ ಸರಸ ಸಂವಾದದ ಸುಂದರ-ಸುವರ್ಣದ ಚೌಕಟ್ಟನ್ನು ನಿರ್ಮಿಸಿದ ರಸಿಕ ಶಿಖಾಮಣಿಯಾಗಿ ಅದರಲ್ಲಿ ನಿರ್ದಿಷ್ಟವಾದ ಹಾಸ್ಯರಸದ ಪ್ರವಾಹವನ್ನು ತೆರೆ ತೆರೆಯಾಗಿ ಉಕ್ಕಿಸಿದ ನಗೆಗಾರನೂ, ಪ್ರಕೃತಿ ಸೌಂದರ್ಯ ವರ್ಣನೆಯಲ್ಲಿ ಕಾಳಿದಾಸ, ಷೇಕ್ಸ್‌ಪಿಯರರಿಗಿಂತ ಕಡಿಮೆಯಲ್ಲದವನೂ, ವಿಶ್ವ ಸಾಹಿತ್ಯ ಸಮ್ಮೇಳನದಲ್ಲಿ ತುಳುನಾಡಿನ ಪ್ರಾತಿನಿಧ್ಯದಲ್ಲಿ ರತ್ನಾಕರ ವರ್ಣಿಯ ಜತೆಗೆ ನಿಲ್ಲುವ ಕವಿವರೇಣ್ಯ ಮುದ್ದಣನು ನಮ್ಮ ತುಳುನಾಡಿನವನೆಂಬುದು ಬಹಳ ಹೆಮ್ಮೆಯ ವಿಷಯ. ಪ್ರೌಢಶಾಲೆಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕನಾಗಿರುವ ತಾನು ಬರೆದಿರುವ ಕಾವ್ಯಗಳು ಮನ್ನಣೆಯನ್ನು ಗಳಿಸಲಾರವೆಂಬ ಸಂಶಯದಿಂದ ಅನ್ಯಕರ್ತೃತ್ವದ ಸೋಗಿನಲ್ಲಿ ತನ್ನ ಕೃತಿಗಳನ್ನೀತ ರಚಿಸಿರುವವನು. 'ತಿರುಳ್ಗನ್ನಡಿಗನಡಿದಾವರೆಯ ಬಂಡುಣಿಗಳಪ್ಪ ಕನ್ನಡಗಬ್ಬಿಗರ ಮನೆಯೂಳಿಗದವನೊರ್ವಂ ಕನ್ನಡಿಗಂ'' ಎಂಬ ಹೆಸರಿನಿಂದ 'ಅದ್ಭುತ ರಾಮಾಯಣ'ವೆಂಬ ಹಳೆಗನ್ನಡ ಗದ್ಯ ಕಾವ್ಯವನ್ನೂ, 'ಚಾವಡಿ ರಂಗಭಟ್ಟನಾತ್ಮಜೆ ಮಹಾಲಕ್ಷ್ಮಿ' ಎಂಬ ನಾಮಧೇಯದಿಂದ 'ರಾಮಪಟ್ಟಾಭಿಷೇಕ'ವೆಂಬ ವಾರ್ಧಕಷಟ್ಪದಿಯ ಕಾವ್ಯವನ್ನೂ, 'ಕಬ್ಬಿಗರ ಬಲ್ಲಹಂ ಮುದ್ದಣಂ' ಎಂಬ ಹೆಸರಿನಲ್ಲಿ 'ರಾಮಾಶ್ವಮೇಧಂ' ಎಂಬ ಹಳೆಗನ್ನಡ ಗದ್ಯ ಕಾವ್ಯವನ್ನೂ ಬರೆದಿರುವನು. ತನ್ನ ನಿಜವಾದ ಹೆಸರಿನಲ್ಲಿ 'ರತ್ನಾವತೀ ಕಲ್ಯಾಣ' ಮತ್ತು 'ಕುಮಾರ ವಿಜಯ' ಎಂಬ ಯಕ್ಷಗಾನ ಕೃತಿಗಳನ್ನು ಬರೆದಿರುವನು. ನಿರಾಡಂಬರವಾದ ಜೀವನ, ಉನ್ನತವಾದ ಆದರ್ಶ, ನಿರಪೇಕ್ಷವಾದ ಭಾಷಾಭಿಮಾನ, ನಿರ್ದುಷ್ಟವಾದ ರಸಿಕತೆ, ಕಷ್ಟಮಯವಾದ ಬಡತನ ಇತ್ಯಾದಿಗಳಲ್ಲೂ ಸರಸ್ವತಿಯ ಉಪಾಸಕನಾಗಿ ಪಾಂಡಿತ್ಯ, ಕವಿತ್ವಗಳನ್ನು ಸಂಪಾದಿಸಿದ ಈ ಕವಿಯ ಸತ್ಸಂಕಲ್ಪ, ದೃಢ ನಿಶ್ಚಯಾದಿಗಳು ಕವಿಯನ್ನು ಮಹಾಕವಿ ಮಟ್ಟಕ್ಕೆ ಏರಿಸುತ್ತವೆ.

ಈಗಿನ ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನಲ್ಲಿ ನಂದಳಿಕೆಯೆಂಬುದೊಂದು ಗ್ರಾಮ, ಸುತ್ತಲೂ ಹಚ್ಚಹಸುರನ್ನೇ ಹೊದ್ದಿರುವ ಪ್ರಕೃತಿ; ಗ್ರಾಮದ ಒಳಗೆ ಶೋಭಿಸುತ್ತಿರುವ ಬತ್ತದ ಗದ್ದೆಗಳು, ಅವುಗಳ ಸುತ್ತಲೂ ಅಲ್ಲಲ್ಲಿ ಮುಗಿಲೆತ್ತರಕ್ಕೆ ಬೆಳೆದು ಚಾಮರ ಬೀಸುತ್ತಿರುವ ತೆಂಗು-ಕಂಗಿನ ಮರಗಳು; ಒಂದೆರಡು ಕಡೆಗಳಲ್ಲಿ, ಹೊಲಗದ್ದೆಗಳೆಡೆಯಲ್ಲಿ ಜುಳುಜುಳು ನಿನಾದದಿಂದ ಹರಿಯುತ್ತಿರುವ ತಿಳಿ ನೀರಿನ ತೊರೆಗಳು ಊರಿನ ಶೋಭೆಯನ್ನು ಹೆಚ್ಚಿಸಿವೆ. ಗ್ರಾಮವನ್ನೂ, ಗ್ರಾಮ ನಿವಾಸಿಗಳನ್ನೂ ರಕ್ಷಿಸುತ್ತಿರುವ ಶ್ರೀ ಮಹಾಲಿಂಗೇಶ್ವರ ದೇವಾಲಯವು ಊರಿನ ನಡುವಿನಲ್ಲಿದೆ. ಈ ದೇವಳಕ್ಕೆ ಅನತಿ ದೂರದಲ್ಲಿಯೇ 'ಚಾವಡಿ ಅರಮನೆ' ಎಂಬ ಹೆಸರಿನ ಪ್ರಾಚೀನ ಕಾಲದ ಬೃಹತ್ ಮನೆಯೊಂದು ಶೋಭಿಸುತ್ತಿದ್ದು, ಇದು ಊರನ್ನಾಳುತ್ತಿರುವ ಹೆಗ್ಗಡೆ ಮನೆತನದವರಿಗೆ ಸೇರಿದ್ದು ಅದರಲ್ಲಿ ಅವರೆ ವಾಸ್ತವ್ಯವಿದೆ.

ಈ ಊರಿನಲ್ಲಿ ಎತ್ತರಕ್ಕೆ ಬೆಳೆದು ನಿಂತು ತಮ್ಮ ಗರಿಗೊಡೆಗಳನ್ನು ಚಾಚಿರುವ ಕಲ್ಪವೃಕ್ಷಗಳ ಅಡಿಯಲ್ಲಿ ಅಲ್ಲಲ್ಲಿ ಅಡಿಕೆ ಮರದ ಸೋಗೆಯ ಹೊದಿಕೆಗಳನ್ನು ಹೊದ್ದುಕೊಂಡು ನಿಂತಿರುವ ಚಿಕ್ಕ-ದೊಡ್ಡ ಮನೆಗಳು ಶೋಭಿಸುತ್ತಿವೆ. ಇಲ್ಲಿನ ದೇವಸ್ಥಾನದ ಪಶ್ಚಿಮದಲ್ಲಿ ಈಗ ಪಾಳು ಬಿದ್ದಿರುವ ನೆಲಗಟ್ಟಿನ ಮೇಲೆ ನಿಂತಿದ್ದ ಮನೆಯೊಂದರಲ್ಲಿ ಈ ಕವಿಯ ತಂದೆತಾಯಿಯರು ವಾಸಿಸಿಕೊಂಡಿದ್ದರು. ಪಾಟಾಳಿ ತಿಮ್ಮಪ್ಪಯ್ಯ ಎಂಬವರೇ ಕವಿಯ ತಂದೆ ಮತ್ತು ಮಹಾಲಕ್ಷ್ಮಮ್ಮ ಎಂಬವರೇ ತಾಯಿ ಎಂದು ತಿಳಿದು ಬರುತ್ತದೆ. ಈ ತಿಮ್ಮಪ್ಪಯ್ಯನವರು ಊರಿನ ದೇವಸ್ಥಾನದ ಉತ್ಸವದ ಸಮಯದಲ್ಲಿ ಕಟ್ಟಿಗೆ ಕೋಲು ಹಿಡಿಯುವ ವೃತ್ತಿಯವರಾಗಿದ್ದರಂತೆ. ಇದರೊಂದಿಗೆ ದೇವಸ್ಥಾನದಲ್ಲಿ ದೇವರ ಪೂಜೆಗೆ ಬೇಕಾಗುವ ಹೂ ಮಾಲೆಯನ್ನು ಕಟ್ಟಿಕೊಡುವ ಕೆಲಸವನ್ನೂ ಮಾಡುತ್ತಿರುವವರು ಎಂದೂ ತಿಳಿದು ಬರುತ್ತದೆ. ಇವರ ಮನೆತನಕ್ಕೆ ಈ ಕೆಲಸಗಳು ಹಿಂದಿನಿಂದಲೂ ಬಂದ ವೃತ್ತಿಯಾಗಿದ್ದು, ಇವರು ಇದರಲ್ಲೇ ತೃಪ್ತಿಯನ್ನು ಹೊಂದಿ ಸಂತೋಷದಿಂದಲೇ ಜೀವನವನ್ನು ಸಾಗಿಸುತ್ತಿದ್ದರು. ತಿಮ್ಮಪ್ಪಯ್ಯನವರಿಗೆ ಮೂವತ್ತು ವರ್ಷವೂ, ಮಹಾಲಕ್ಷ್ಮಮ್ಮನವರಿಗೆ ಹದಿನೈದು ವರ್ಷವೂ ವಯಸ್ಸಾಗಿದ್ದಾಗ ಈ ದಂಪತಿಗಳ ಹಿರಿಯ ಮಗನಾಗಿ ಕವಿ ಲಕ್ಷ್ಮೀನಾರಾಯಣನು ಕ್ರಿ.ಶ. ಸಾವಿರದ ಎಂಟುನೂರ ಎಪ್ಪತ್ತನೆಯ ಇಸವಿ, ಜನವರಿ ತಿಂಗಳ ಇಪ್ಪತ್ತನಾಲ್ಕನೆಯ ತಾರೀಕು, ಶುಕ್ಲ ಸಂ।ರದ ಪುಷ್ಯ ಬಹುಳ ಅಷ್ಟಮಿ ಸೋಮವಾರ ಜನಿಸಿದನೆಂದು ಕನ್ನಡದ ಮೊದಲ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈಗಳವರು ಹೇಳುತ್ತಾರೆ. ಮೊದಲು ಹುಟ್ಟಿದ ಗಂಡು ಮಗುವಾದುದರಿಂದಲೂ, ಶೈಶವ ಸಹಜವಾದ ಆಟಪಾಟಗಳಿಂದ ಮನಸೆಳೆಯುವಂತಿದ್ದುದರಿಂದಲೂ ತಂದೆ ತಾಯಿಯರು ಮಗುವನ್ನು ಅಕ್ಕರೆಯಿಂದಲೇ ಸಾಕಿ ಸಲಹುತ್ತಿದ್ದರು. ತಾಯಿ ಮಹಾಲಕ್ಷ್ಮಿಯು ಮುದ್ದು ಮುದ್ದಾದ ತನ್ನ ಮಗುವನ್ನು ಮುದ್ದಣ್ಣ ಎಂದೇ ಕರೆಯುತ್ತಿದ್ದು ಮುಂದೆ 'ಮುದ್ದಣ' ಎಂಬ ಹೆಸರೇ ಲಕ್ಷ್ಮೀನಾರಾಯಣನಿಗೆ ಶಾಶ್ವತವಾಯಿತು.

ನಂದಳಿಕೆಯಲ್ಲಿ ಮೂರೂರು ಚರಡಪ್ಪಯ್ಯ ಎಂಬವರು ಒಂದು ಪ್ರಾಥಮಿಕ ಶಾಲೆಯನ್ನು ಸ್ಥಾಪಿಸಿದ್ದರು. ಈ ಶಾಲೆಗೆ ಸೇರಿದ ಲಕ್ಷ್ಮೀನಾರಾಯಣನು ನಂದಳಿಕೆಯ ದೇವರಾಯ, ಸಿದ್ದು ಶೆಟ್ಟಿ, ಬಾಬು, ಕೆ.ರಾಮಚಂದ್ರಯ್ಯ, ತೇಜಪ್ಪ ಶೆಟ್ಟಿ, ಕುಪ್ಪಣ್ಣ ಭಟ್ಟ ಮೊದಲಾದ ಸಹಪಾಠಿಗಳೊಂದಿಗೆ ಲಕ್ಷ್ಮೀ ನಾರಾಯಣನ ವಿದ್ಯಾಭ್ಯಾಸ ಸಾಗಿತು. ಈ ಶಾಲೆಯಲ್ಲಿ ಲಕ್ಷ್ಮೀನಾರಾಯಣನು ಓದು, ಬರೆಹ ಮತ್ತು ಗಣಿತಗಳನ್ನು ಅಭ್ಯಾಸ ಮಾಡಿದನು. ಕವಿಯಾದ ಮುದ್ದಣನಲ್ಲಿ ಮುಂದೆ ನಾವು ಕಾಣುವ ರಸಿಕತೆ, ಭಾವೋನ್ನತಿ ಮತ್ತು ಆರ್ದ್ರ ಹೃದಯ ಮುಂತಾದ ಗುಣವಿಶೇಷಗಳನ್ನು ಬೆಳೆಯಿಸಿಕೊಳ್ಳುವುದಕ್ಕೆ ಪೂರಕವಾದ ಸಂಸ್ಕಾರದ ಹಿನ್ನೆಲೆಯು ಆತನು ಜೀವಿಸಿಕೊಂಡಿದ್ದ ಸ್ಥಳದ ಆಸುಪಾಸಿನಲ್ಲಿಯೇ ರೂಪುಗೊಂಡಿತು. ಶಾಲೆಯ ಒಳಗೆ ಅಕ್ಷರಾಭ್ಯಾಸದ ಜೊತೆಗೆ ಹೊರಗೆ ಪ್ರಕೃತಿಯ ಮಡಿಲಲ್ಲಿ ಸೃಷ್ಟಿ ನಿರೀಕ್ಷಣೆಯ ಸೌಂದರ್ಯದ ಪಾಠವನ್ನು ಬಾಲಕ ಮುದ್ದಣನು ಕಲಿತುಕೊಳ್ಳುತ್ತಿದ್ದನು. ಊರಿನ ದೇವಳದಲ್ಲಿ ನಡೆಯುತ್ತಿದ್ದ ವಿಶೇಷ ಪೂಜೆ ಮತ್ತು ಉತ್ಸವಾದಿಗಳು, ಸಮಾಜದಲ್ಲಿ ಮನೆಮನೆಗಳಲ್ಲಿ ನಡೆಯುತ್ತಿದ್ದ ಹಬ್ಬಹರಿದಿನಗಳ ಆಚರಣೆ, ಇವುಗಳಲ್ಲಿ ಅಡಗಿರುವ ನೈತಿಕ-ಧಾರ್ಮಿಕ ಮೌಲ್ಯಗಳು ಮುಂತಾದುವುಗಳನ್ನು ಬಾಲಕ ಲಕ್ಷ್ಮೀನಾರಾಯಣನು ಗ್ರಹಿಸಿ ತನ್ನೊಳಗೇ ವಿಶಿಷ್ಟವಾದ ಗುಣವಿಶೇಷಗಳನ್ನೂ, ವ್ಯಕ್ತಿತ್ವವನ್ನೂ ತಾಳಿದ್ದನು.

(ಮುಂದುವರಿಯುವುದು)




ಶ್ರೀ ಸುರೇಶ ರಾವ್ ನಂದಾವರ ಮತ್ತು ಶ್ರೀಮತಿ ಭಾಗ್ಯಲಕ್ಷ್ಮೀ

ವೈವಾಹಿಕ ಜೀವನದ ಬೆಳ್ಳಿಹಬ್ಬದ ಸಂಭ್ರಮ

**ಶ್ರೀ ಸುರೇಶ ರಾವ್ ನಂದಾವರ ಮತ್ತು ಶ್ರೀಮತಿ ಭಾಗ್ಯಲಕ್ಷ್ಮೀ**

ಹಾಗೂ

**ಶ್ರೀ ದಿನಕರ ರಾವ್ ನಂದಾವರ ಮತ್ತು ಶ್ರೀಮತಿ ಪೂರ್ಣಿಮಾ**

ತಮ್ಮ ವೈವಾಹಿಕ ಜೀವನದ ಬೆಳ್ಳಿಹಬ್ಬವನ್ನು ದಿನಾಂಕ 20-11-2011ರಂದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಸಂಪನ್ನ ಗೊಳಿಸಿರುವ ಇವರಿಗೆ ಹಾರ್ದಿಕ ಶುಭಾಶಯಗಳು

**ಬಂಧು-ಬಾಂಧವರು**



ಶ್ರೀ ದಿನಕರ ರಾವ್ ನಂದಾವರ ಮತ್ತು ಶ್ರೀಮತಿ ಪೂರ್ಣಿಮಾ

# ರಂಗದಲ್ಲಿ ಮೆರೆದ ''ಆದಿಶಂಕರಾಚಾರ್ಯ''

ತಾ.02-01-2012ರ ಸೋಮವಾರ ಸಂಜೆ ಉಡುಪಿಯ ಪಿಪಿಸಿ ಆಡಿಟೋರಿಯಂನಲ್ಲಿ ಮುಂಬಯಿ ಕನ್ನಡ ಕಲಾಕೇಂದ್ರವು ಪ್ರಸ್ತುತ ಪಡಿಸಿದ ಕನ್ನಡ ನಾಟಕ 'ಶ್ರೀ ಆದಿಶಂಕರಾಚಾರ್ಯ' ಪ್ರದರ್ಶನವು ಯಶಸ್ವಿಯಾಗಿ ನೆರವೇರಿತು. ಸುಮಾರು 50 ಜನ ನಟ-ನಟಿಯರನ್ನು ಒಳಗೊಂಡ ಈ ನಾಟಕದ ರಚನೆ ಮತ್ತು ನಿರ್ದೇಶನವನ್ನು ಮಾಡಿ ಸ್ವತಃ ಪಾತ್ರಾಭಿನಯ ದಲ್ಲಿ ಮಿಂಚಿದ ಬೈಲೂರು ಬಾಲಚಂದ್ರ ರಾಯರ ಪ್ರಯತ್ನಕ್ಕೆ, ಶ್ರಮಕ್ಕೆ ರಂಗಕರ್ಮಿಗಳು ಶಹಬಾಸ್ ಎನ್ನಲೇಬೇಕು.

ಈ ನಾಟಕವು ಪರಮಪೂಜ್ಯ ಶೃಂಗೇರಿ ಶ್ರೀಗಳವರ ಸಮ್ಮುಖದಲ್ಲಿಯೂ ಪ್ರದರ್ಶನಗೊಂಡು ಮಹಾರಾಷ್ಟ್ರ ಹಾಗೂ ಕರ್ನಾಟಕದಲ್ಲಿ ಹತ್ತು ಹಲವು ಪ್ರಯೋಗಗಳನ್ನೂ ಕಂಡಿದೆ. ಅಂತೆಯೇ ಉಡುಪಿಯಲ್ಲಿ ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಉಡುಪಿ ಮತ್ತು ಶ್ರೀ ಶಂಕರ ಸೇವಾ ವೇದಿಕೆ, ಉಡುಪಿ ಆಶ್ರಯದಲ್ಲಿ 'ಶ್ರೀ ಆದಿಶಂಕರಾಚಾರ್ಯ' ನಾಟಕವು ಪ್ರದರ್ಶನಗೊಂಡಿತು.



ನಾಟಕದಲ್ಲಿ ಸಂಗೀತ, ನೃತ್ಯ, ಯಕ್ಷಗಾನ, ಭರತನಾಟ್ಯಗಳ ತುಣುಕುಗಳನ್ನು ಪ್ರದರ್ಶಿಸಿ, ಆಧ್ಯಾತ್ಮದೊಂದಿಗೆ ಕಲೋಪಾಸನೆಯೂ ನಡೆಯಿತು. ಅಚ್ಚುಕಟ್ಟಾದ ದೃಶ್ಯ, ಸಂಯೋಜನೆ ಹಾಗೂ ಅತ್ಯಂತ ವೇಗವಾಗಿ ಅವುಗಳ ಜೋಡಣೆಯು ನಾಟಕದ ಓಟಕ್ಕೆ ಮೆರುಗು ನೀಡಿತು. ಎಲ್ಲ ಪಾತ್ರಗಳೂ ಅಗತ್ಯಕ್ಕೆ ತಕ್ಕಂತೆ ಸಂಭಾಷಣೆ ಹಾಗೂ ಅಭಿನಯದಿಂದ ತಮ್ಮ ಜವಾಬ್ದಾರಿಯನ್ನು ಅರಿತು ಕೆಲಸ ಮಾಡಿದರು. ಅದರಲ್ಲಿಯೂ-ಶಂಕರಾಚಾರ್ಯ, ಮಂಡನ ಮಿಶ್ರ, ಉಭಯ ಭಾರತಿ, ಮೊದಲಾದ ಪಾತ್ರಗಳು ಪ್ರೇಕ್ಷಕರ ಮನಮುಟ್ಟುವಂತೆ ಇತ್ತು. ಹಿತಮಿತವಾದ ಹಿನ್ನೆಲೆ ಗಾಯನ, ಬೇಕಾದಲ್ಲಿ ಮಾತ್ರ ರಂಜನೀಯವಾಗಿ ಕೇಳಿ ಬರುವ ಸಂಗೀತ, ದೃಶ್ಯಕ್ಕೆ ತಕ್ಕಂತೆ ಬೆಳಕಿನ ಸಂಯೋಜನೆ ಒಟ್ಟಿನಲ್ಲಿ ನಾಟಕವು ಎಲ್ಲಾ ರಂಗದಲ್ಲೂ ಸಂಪೂರ್ಣ ಯಶಸ್ವಿ ಪ್ರಯೋಗವೆಂಬಂತೆ ತೋರಿತು.

ಇಂದಿನ ಆಧುನಿಕ ಯುಗದಲ್ಲಿ ಯಾವುದೇ ಪ್ರದರ್ಶನವೂ (ನಾಟಕ, ಯಕ್ಷಗಾನ...) 2 ಗಂಟೆಗಿಂತ ಹೆಚ್ಚಾದಲ್ಲಿ ಪ್ರೇಕ್ಷಕನ ತಾಳ್ಮೆಯ ಪರೀಕ್ಷೆ ನಡೆಸಿದಂತಾಗುತ್ತದೆ ಎಂದು ನಾಟಕ ನೋಡಿದ ಪ್ರೇಕ್ಷಕರೊಬ್ಬರು ಮಾತಾಡಿಕೊಂಡದ್ದೂ ಕೇಳಿಬಂತು.

**ಸನ್ಮಾನ ಹಾಗೂ ಸಭಾಸಮಾರಂಭ :**

ನಾಟಕ ಪ್ರದರ್ಶನದ ನಡುವೆ ವಿರಾಮ ನೀಡಿ-ಸಭಾಸಮಾರಂಭವು ನೆರವೇರಿತು. ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾವ್, ಕರ್ನಾಟಕ ಯಕ್ಷಗಾನ ಅಕಾಡಮಿಯ ಅಧ್ಯಕ್ಷ ಡಾ. ಎಂ.ಎಲ್.ಸಾಮಗ, ಜ್ಞಾನ ಭಾರತಿ ಉಡುಪಿಯ ಕಾರ್ಯದರ್ಶಿ ಶ್ರೀ ಎಸ್.ಎಲ್. ಕಾರ್ಣಿಕ್, ನಾಟಕ ರಚನೆ ಹಾಗೂ ನಿರ್ದೇಶಕ ಬೈಲೂರು ಬಾಲಚಂದ್ರರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದು ನಾಟಕದ ನಟಿಯರಾದ ಶ್ರೀಮತಿ ತಾರಾ ರಾವ್, ಕು। ಸಹನಾ ಭಾರದ್ವಾಜ್, ಕು। ಪ್ರಿಯಾಂಜಲಿಯವರನ್ನು ಫಲ ಪುಷ್ಪ, ಶಾಲು ಹಾರ, ಸ್ಮರಣಿಕೆಗಳೊಂದಿಗೆ ಗೌರವಿಸಲಾಯಿತು. ಯಕ್ಷಗಾನ ಅಕಾಡಮಿಯ ಅಧ್ಯಕ್ಷರಾದ ಶ್ರೀ ಎಂ.ಎಲ್.ಸಾಮಗರು ನಾಟಕ ರಚನೆ-ರಂಗ ಪ್ರಯೋಗ, ಅಭಿನಯ ಮೊದಲಾದ ಸಾಹಸದ ಜೊತೆಗೆ ಮುಂಬೈಯಲ್ಲಿದ್ದೂ ಕನ್ನಡ ಮಾತೆಯ ಸೇವೆಗೈಯುತ್ತಿರುವ ಇಡೀ ತಂಡಕ್ಕೆ ಅಭಿಮಾನದ ವಂದನೆ ಸಲ್ಲಿಸಿದರು. ಶ್ರೀ ಸಿ.ಎಸ್.ರಾಯರು ಎಲ್ಲಾ ಕಲಾವಿದರಿಗೆ ಸಂಘದ ವತಿಯಿಂದ ಸ್ಮರಣಿಕೆ ನೀಡಿ ಗೌರವಿಸಿದರು. ಶ್ರೀ ಕೃಷ್ಣ ಕುಮಾರ್ ರಾವ್ ಮಟ್ಟು ಸ್ವಾಗತಿಸಿ, ಕಾರ್ಯಕ್ರಮ ಸಂಯೋಜನೆ ಮಾಡಿದರು.



ಶ್ರೀ ಕೆ. ವೇಣುಗೋಪಾಲರಾವ್ ಧನ್ಯವಾದ ಅರ್ಪಿಸಿದರು. ಶ್ರೀ ಬಿ.ಕೃಷ್ಣಮೂರ್ತಿ ರಾವ್, ಜಯರಾಮರಾವ್, ಮಂಜುನಾಥ ಹೆಬ್ಬಾರ್, ಅರವಿಂದ ಕುಮಾರ್, ಪ್ರಫುಲ್ಲಚಂದ್ರ ರಾವ್, ಅಜಿತ್‌ಕುಮಾರ್, ಗಣೇಶ್ ಹೆಬ್ಬಾರ್, ಸದಾನಂದ ರಾವ್, ಪ್ರಕಾಶ್ ಕೋಲ್ಪೆ ಮೊದಲಾದವರು ಮುಂಬೈ ನಾಟಕ ತಂಡಕ್ಕೆ ಬೇಕಾದ ವ್ಯವಸ್ಥೆ ಮಾಡುವಲ್ಲಿ ಸಹಕರಿಸಿದರು.

-ಕೃಷ್ಣಕುಮಾರ್‌ರಾವ್, ಮಟ್ಟು

## ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ

## ವಿಶೇಷ ಸರ್ವಸದಸ್ಯರ ಸಭೆ-ಶೇ.10 ಡಿವಿಡೆಂಡ್ ನೀಡಲು ನಿರ್ಧಾರ

ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ಸರ್ವಸದಸ್ಯರ ವಿಶೇಷ ಮಹಾಸಭೆಯು ತಾ.24-12-2012 ಶನಿವಾರ ಅಪರಾಹ್ನ 4 ಗಂಟೆಗೆ ಕಛೇರಿಯ ಭೂವರಾಹ ಸಂಕೀರ್ಣದ ಸಭಾಭವನದಲ್ಲಿ ನಡೆಯಿತು. ಈ ಸಭೆಯಲ್ಲಿ 2010-11ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಯ ಅಂಗೀಕಾರ ಮತ್ತು ನಿವ್ವಳ ಲಾಭದ ವಿಂಗಡಣೆ ಬಗ್ಗೆ ನಿರ್ಧರಿಸಲಾಯಿತು. ಶ್ರೀಮತಿ ಸುನೀತಾ ಹಾಗೂ ಶ್ರೀಮತಿ ಭಾರತಿಯವರ ಪ್ರಾರ್ಥನೆಯೊಂದಿಗೆ ಸಭೆಯು ಪ್ರಾರಂಭದಲ್ಲಿ ಸೊಸೈಟಿಯ ಅಧ್ಯಕ್ಷರಾದ ಶ್ರೀ ಎಮ್.ಸದಾನಂದರಾಯರು ಎಲ್ಲರನ್ನೂ ಸ್ವಾಗತಿಸಿ ಸೊಸೈಟಿಯ ಬೆಳವಣಿಗೆಯನ್ನು ವಿವರಿಸಿದರು. ಅದಕ್ಕಾಗಿ ಶ್ರಮಿಸುತ್ತಿರುವ ಎಲ್ಲರಿಗೂ ಅಭಿನಂದನೆ ಸಲ್ಲಿಸಿದರು.

ಸಂಘವು ವರದಿ ವರ್ಷದಲ್ಲಿ ರೂ.3,94,872 ಲಾಭಗಳಿಸಿದ್ದು ಕಾರ್ಯದರ್ಶಿ ಶ್ರೀ ಪಟ್ಟಾಭಿರಾಮ ಎನ್.ಎಸ್‌ರವರು ಲೆಕ್ಕಪರಿಶೋಧಕರ ವರದಿಯನ್ನು ಸಭೆಯ ಮುಂದಿಟ್ಟರು. ಸಭೆಯು ಸರ್ವಾನುಮತದಿಂದ ಅದನ್ನು ಅಂಗೀಕರಿಸಿತು. ನಿವ್ವಳ ಲಾಭದ ವಿಂಗಡಣೆಯಾಗಿ ಶೇ.10 ಲಾಭಾಂಶವನ್ನು ಸದಸ್ಯರಿಗೆ ನೀಡಲು ನಿರ್ಣಯಿಸಲಾಯಿತು.

ಕಾರ್ಯದರ್ಶಿಯವರು ಈ ಸಂದರ್ಭದಲ್ಲಿ ಉಳಿತಾಯ ಖಾತೆ ಹೊಂದಿರುವ ಸದಸ್ಯರ ಖಾತೆಗಳಿಗೆ ಲಾಭಾಂಶವನ್ನು ಜಮೆ ಮಾಡಲಾಗುವುದು. **ನಮ್ಮಲ್ಲಿ ಖಾತೆ ಇಲ್ಲದವರು ಖುದ್ದಾಗಿ ಸೊಸೈಟಿಯಿಂದ ಲಾಭಾಂಶವನ್ನು ಪಡೆದುಕೊಳ್ಳಲು ವಿನಂತಿಸಿದರು. ಹಾಗೆಯೇ ಈ ವರ್ಷದ ಕ್ಯಾಲೆಂಡರ್‌ನ್ನು ಕೂಡಾ ಸದಸ್ಯರು ಕಛೇರಿಯ ಸಮಯದಲ್ಲಿ ಪಡೆದುಕೊಳ್ಳಲು ತಿಳಿಸಿದರು.**

ಕೊನೆಯಲ್ಲಿ ಕುಕ್ಕಿಕಟ್ಟೆ ಶಾಖೆಯ ಪ್ರಬಂಧಕರಾದ ಶ್ರೀ ಕೆ. ವಿಶ್ವನಾಥರಾವ್ ಧನ್ಯವಾದವನ್ನಿತ್ತರು. ಸೊಸೈಟಿಯ ಉಪಾಧ್ಯಕ್ಷರಾದ ಕೆ. ವೇಣುಗೋಪಾಲ ರಾವ್ ಹಾಗೂ ನಿರ್ದೇಶಕರೆಲ್ಲರೂ ಉಪಸ್ಥಿತರಿದ್ದರು.

- ಕಾರ್ಯದರ್ಶಿ

**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669, Sharekhan Commodities Pvt.Ltd.: MCX- 10080(MCX/TCM/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com, Regd Addr.: A-206, Phoenix House, Phoenix Mills Compound, Senapati Bapat Marg, Lower Parel, Mumbai- 400013. Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122 NSE: INS23105924)

ಷಷ್ಠ್ಯಬ್ದಿ ಶಾಂತಿ ಸಮಾರಂಭ



**ಶ್ರೀ ವೈ. ಅಚ್ಯುತರಾವ್ ಮತ್ತು ಶ್ರೀಮತಿ ಮೀನಾಕ್ಷಿ ಎ.ರಾವ್**

''ಕಸ್ತೂರಿ ನಿಲಯ'', ಕುಂಜಾರುಗಿರಿ, ಉಡುಪಿ ತಾಲೂಕು.

ನಿಮ್ಮ ಪ್ರೀತಿಯ ಶುಭ ಹಾರೈಕೆ ನಮಗಿರಲಿ
ನಮ್ಮ ಗೌರವದ ಶುಭ ನಮನ ನಿಮಗಿರಲಿ
ನಮ್ಮನ್ನೆಲ್ಲ ಕಾಯುವ ಗಿರಿಮಾತೆಯ ಶ್ರೀರಕ್ಷೆ ನಮ್ಮೆಲ್ಲರಿಗಿರಲಿ
ಎಂದು ಹಾರೈಸುವ

**ಶ್ರೀ ವಾಸುದೇವರಾವ್ ಮತ್ತು ಮಾನಸಾ ವಾಸುದೇವ ರಾವ್, ಕುಂಜಾರುಗಿರಿ**
**ಶ್ರೀ ಮಧುಸೂಧನರಾವ್, ಕುಂಜಾರುಗಿರಿ**
**ಶ್ರೀಮತಿ ಕಸ್ತೂರಿ ಸುಭಾಸಚಂದ್ರರಾವ್, ತುಲಜಾಪುರ**
**ಮಾಸ್ಟರ್ ಮಾನ್ವಿತ್ ವಿ.ರಾವ್, ಕು। ಸಮೀಕ್ಷಾ ಎಸ್.ರಾವ್**

# ತುಳುನಾಡಿನಲ್ಲಿ ಬ್ರಾಹ್ಮಣ್ಯ

ದಿ। ಪ್ರೊ। ಗುರುರಾಜ ಭಟ್ಟರ
ಕೃತಿಯಿಂದ ಸಂಗ್ರಹಿಸಿದ ಭಾಗ
ಸಂಗ್ರಹ : ಸಿ.ಎಸ್.ರಾವ್.

(ಹಿಂದಿನ ಸಂಚಿಕೆಯಿಂದ)

ಹಾಗಾದರೆ ಈ ತುಳು ಬ್ರಾಹ್ಮಣರು ತಮ್ಮ ಅಭ್ಯಾಸದ ಫಲವಾದ ಜ್ಞಾನವನ್ನು ಮಲೆಯಾಳದ ಪ್ರಭೇದವಾದ ಲಿಪಿಯಲ್ಲಿ ಬರೆದುದಾಗಲೀ, ಬರೆಯಲು ಪ್ರಯತ್ನಿಸಿದುದಾಗಲೀ, ತಮ್ಮ ಜ್ಞಾನವನ್ನು ಗುಪ್ತವಾಗಿರಿಸುವುದಕ್ಕೋಸ್ಕರವೆಂದು ಖಂಡಿತವಾಗಿ ಹೇಳಲು ತೃಪ್ತಿಕರವಾದ ಕಾರಣಗಳು ಕಂಡುಬರುವುದಿಲ್ಲ. ಆದುದರಿಂದ ಈ ತೆರನಾದ ಟೀಕೆಯಿಂದ ಬೇಳೆ ಬೇಯುವಂತಿಲ್ಲ. ಧಾರ್ಮಿಕ ಗ್ರಂಥಗಳನ್ನು ಕನ್ನಡ ಲಿಪಿಯಲ್ಲಿ ಬರೆಯುವ ಅಭ್ಯಾಸ ಅರ್ವಾಚೀನ, ಮಾತ್ರವಲ್ಲದೆ ತಾಳೆ ಓಲೆಯಲ್ಲಿ (ಗರಿಯಂತಿರುವ ಎಲೆಯ ಮೇಲೆ) ಸಾಹಿತ್ಯವನ್ನು ಬರೆಯಲು ಈ 'ತುಳುಲಿಪಿ' ಎಂದು ಹೆಸರಾಂತ ಲಿಪಿಯು ಬಹು ಅನುಕೂಲವಾಗಿದೆ, ಎಂಬುದನ್ನೂ ಮನವರಿಕೆ ಮಾಡಿಕೊಂಡರೆ ಉತ್ತಮ.

ದೇವನಾಗರಿ ಲಿಪಿಯಲ್ಲಿ ಬರೆದ ಗ್ರಂಥಗಳೂ ಈ ತಾಳೆ ಓಲೆಯಲ್ಲಿ ಕಂಡು ಬರುತ್ತವೆ. ಆದರೆ ಅವುಗಳ ಸಂಖ್ಯೆ ಕಡಿಮೆ. ಆದುದರಿಂದ 'ತುಳು ಲಿಪಿ' ಎಂಬುದು ನಿಜವಾಗಿಯೂ ತುಳುಭಾಷೆಗಿದ್ದ ಸ್ವತಂತ್ರವಾದ ಅದರ ಲಿಪಿಯಲ್ಲ. ಮಾತ್ರವಲ್ಲದೆ ತುಳು ಲಿಪಿಯು ಬ್ರಾಹ್ಮಣರ ಗುಪ್ತ ಲಿಪಿ ಎಂಬ ತಪ್ಪು ಭಾವನೆಗೆ ಅವಕಾಶವಿಲ್ಲ. ಆ ಲಿಪಿಯಿಂದ ಗ್ರಂಥಗಳನ್ನು ಬರೆದುದರ ಫಲವಾಗಿ ಸಾರ್ವಜನಿಕರಿಗೆ, ಸಾಹಿತ್ಯಗಳನ್ನೋದಿ ಅರ್ಥವಿಸಿಕೊಳ್ಳಲು ಕಷ್ಟವಾಗಿದ್ದಿರಬಹುದು. ಆದರೆ ಅದು ಉದ್ದೇಶಪೂರ್ವಕ ಮಾಡಿದ ಕೆಲಸವಲ್ಲವೆಂದು ನನ್ನ ಅಭಿಪ್ರಾಯ.

ಒಟ್ಟಿನಲ್ಲಿ ಹೇಳುವುದಾದರೆ, ತುಳುನಾಡಿನ ಬ್ರಾಹ್ಮಣರು ಕೇರಳ ದೇಶಕ್ಕೆ ಹೋಗಿ ತಾವು ಧರ್ಮ ಸಂಬಂಧವಾಗಿ ಮಾಡಿದ ಅಭ್ಯಾಸವನ್ನು ಆ ದೇಶದ ಲಿಪಿಯಾದ ಮಲೆಯಾಳಮ್‌ನಲ್ಲಿ ಬರೆದಿರಿಸಿ, ಅದನ್ನು ತುಳುವಕ್ಕೆ ತಂದುದರಿಂದಲೂ, ಅಭ್ಯಾಸ ಬಲದಿಂದ ಹಾಗೂ ಸುಲಭತೆಗಾಗಿ ಅದೇ ಲಿಪಿಯಲ್ಲಿ ತಮ್ಮ ನಾಡಿನಲ್ಲೂ ಬರೆಯುವ ಕ್ರಮವನ್ನಿಟ್ಟುಕೊಂಡದ್ದರಿಂದಲೂ, ಈ ಲಿಪಿಯು 'ತುಳುಲಿಪಿ' ಎಂದು ಹೆಸರನ್ನು ಪಡೆಯಿತು. ತುಳುಭಾಷೆಗೆ ಲಿಖಿತ ಸಾಹಿತ್ಯವಿಲ್ಲ. ಈ ವಿಷಯದಲ್ಲಿ ಇನ್ನೂ ಚರ್ಚೆಯೂ, ಸಂದೇಹವೂ ಇರಲಾರದೆಂದು ತಿಳಿಯುತ್ತೇನೆ. 'ತುಳು ಅಕ್ಷರ ಮಾಲೆ' ಈ ಅಕ್ಷರ ಮಾಲೆಯು ಈಗ ರೂಢಿಯಲ್ಲಿರುವ ಮಲೆಯಾಳಿ ವರ್ಣಮಾಲೆಯನ್ನು ಹೋಲುತ್ತಿದೆ. ಇದನ್ನು ಗ್ರಂಥ ಲಿಪಿ ಎಂದು ಕರೆಯುವುದೂ ಉಂಟು. ಸಂಸ್ಕೃತಗ್ರಂಥಗಳನ್ನು ಪ್ರಚಲಿತವಿದ್ದ ದ್ರಾವಿಡ ಅಕ್ಷರಮಾಲೆಯಲ್ಲಿ ಬರೆಯಲು ಸಾಧ್ಯವಾಗದ ಕಾರಣ ಈ ಬಗೆ ತುಳು ಮತ್ತು ತಮಿಳು ಗ್ರಂಥ ಲಿಪಿಗಳನ್ನು ಸುಮಾರು 14ನೇ ಶತಮಾನದಲ್ಲಿ ಕಲ್ಪಿಸಿರಬೇಕು. ಈ ಲಿಪಿಗಳನ್ನು ಸಂಸ್ಕೃತ ಗ್ರಂಥಗಳನ್ನು ಬರೆಯಲು ಮಾತ್ರ ಉಪಯೋಗಿಸುತ್ತಿದ್ದರು. (ತೆಂಕನಾಡು-ಪುಟ 105)

ಅಹಿಕ್ಷೇತ್ರದಿಂದ ಬಂದುದೆಂದು ಹೆಸರಾಂತ ಬ್ರಾಹ್ಮಣರ ಕುರಿತಾಗಿ ಇನ್ನೊಂದು ಮಹತ್ತಾದ ಸಮಸ್ಯೆ ಇದೆ. E.Thurston ರವರು ಬರೆದಿರುವ 'Castes and Tribes of Southern India' ಎಂಬ ಗ್ರಂಥದಲ್ಲಿ ಈ ಕೆಳಗಿನ ಉಲ್ಲೇಖವಿದೆ. ತುಳುದೇಶದ ಬ್ರಾಹ್ಮಣರು ಅಹಿಚ್ಛತ್ರದಿಂದ ಬಂದರೆಂಬ ಇತಿಹಾಸ ಉಂಟು. ಗಂಡಸರು ಮಾತ್ರ ಈ ತುಳುದೇಶದಲ್ಲಿ ವಸಾಹತು ಮಾಡಲು ಬಂದುದರಿಂದ, ಅವರು ಶೂದ್ರ ಸ್ತ್ರೀಯರನ್ನು ಮದುವೆ ಮಾಡಿಕೊಳ್ಳುವ ಒತ್ತಾಯವಾಯಿತು. ಶ್ರೀ ಮಧ್ವಾಚಾರ್ಯರ ಕಾಲದಲ್ಲಿ ಈ ವರ್ಗದವರು ಮತಾಂತರದಿಂದ ಮೇಲಕ್ಕೇರಿಸಲ್ಪಟ್ಟರು. ತುಳುವರ ಸ್ತ್ರೀಯರನ್ನು 'ಮದುಮಗಳು' ಎಂದು ಸಂಬೋಧಿಸುತ್ತಿದ್ದರೆಂದು ಸೂಚಿಸಲ್ಪಟ್ಟಿದೆ. ಕಾಲಾನುಕ್ರಮದಲ್ಲಿ ಬೇರೆ ಕೆಲವರು ಬ್ರಾಹ್ಮಣರಾಗಿ ಪರಿವರ್ತನೆ ಹೊಂದಿದರು. ಉಡುಪಿ ಹತ್ತಿರವಿರುವ ಮಟ್ಟು ಎಂಬ ಗ್ರಾಮದಲ್ಲಿ ವಾಸಿಸುವವರು ಮಟ್ಟಿ ಬ್ರಾಹ್ಮಣರು. ಇವರು ಹಿಂದಕ್ಕೆ ಮೊಗೇರರಾಗಿದ್ದರೆಂದೂ, ಅನಂತರ ಶ್ರೀ ಸೋದೆ ವಾದಿರಾಜ ಸ್ವಾಮಿಯವರಿಂದ ಬ್ರಾಹ್ಮಣರಾಗಿ ಪರಿವರ್ತಿಸಲ್ಪಟ್ಟರೆಂದೂ ಪ್ರಚಾರವಿದೆ. ಆ ಪ್ರಯುಕ್ತ ಅವರಿಗೆ ಸಹಪಂಙ್ತಿ ಭೋಜನವಿದ್ದಿಲ್ಲ. ಉಳಿದ ಬ್ರಾಹ್ಮಣರೊಡನೆ ಸಮಾನತೆಯೂ ಇದ್ದಿಲ್ಲ. ಈಗ ಅವರು ಉತ್ತಮ ಬ್ರಾಹ್ಮಣರ ಸಾಲಿಗೆ ಸೇರಿದವರಿದ್ದು ಸೋದೆ ಮಠದ ಶಿಷ್ಯರಾಗಿದ್ದಾರೆ. ಬ್ರಾಹ್ಮಣರ ಕೆಲವು ವಿವರಗಳಲ್ಲಿ ಕದಂಬ ವಂಶದ ಮಯೂರ ವರ್ಮನ ಕಾಲದಲ್ಲಿ ಕೆಲವು ಆಂಧ್ರ ಬ್ರಾಹ್ಮಣರನ್ನು ಈ ಜಿಲ್ಲೆಗೆ ಬರಮಾಡಿಕೊಂಡಿತ್ತು ಎಂದು ಪ್ರಚಲಿತವಿದೆ. ಯಾಗಾದಿಗಳನ್ನು ಮಾಡುವ ಬಗ್ಗೆ ಸಾಕಷ್ಟು ಸಂಖ್ಯೆಯಲ್ಲಿ ಬ್ರಾಹ್ಮಣರು ಈ ನಾಡಿನಲ್ಲಿ ಇಲ್ಲದ ಕಾರಣ ಆ ಆಂಧ್ರ ಬ್ರಾಹ್ಮಣರು ಆ ಬ್ರಾಹ್ಮಣರ ಪಂಗಡದಿಂದ ಕೆಲವು ಕುಟುಂಬಗಳನ್ನಾರಿಸಿ ಅವರನ್ನು ಬ್ರಾಹ್ಮಣರನ್ನಾಗಿ ಮಾಡಿ ಅವರಿಗೆ ಪೇರಳೆ, ಕುದುರೆ, ಆನೆ ಇವೇ ಮೊದಲಾದ (Exogomous Sept) ಎಂಬುದನ್ನು ಸೂಚಿಸುವ ಕುಲದ ಹೆಸರುಗಳನ್ನು ಕೊಟ್ಟರೆಂದು ಹೇಳಲಾಗಿದೆ. ಅದೇ ಗ್ರಂಥದಲ್ಲಿ ಮೇಲಿನ ವಿಷಯ ಸಮರ್ಥನೆ ರೂಪದಲ್ಲಿ ಈ ಕೆಳಗಿನ ವಿವರವೂ ಕಂಡುಬರುತ್ತದೆ.

ದಕ್ಷಿಣ ಹಿಂದೂ ದೇಶದಲ್ಲಿ ಪ್ರಬಲವಾಗಿರುವ ಎಲ್ಲಾ ಹಿಂದು ವರ್ಗಗಳ Cephalic Index ಎಂದರೆ ತಲುಬುರುಡೆಯ ಪರಿಮಾಣವನ್ನು ತೋರಿಸುವ ಪಟ್ಟಿಯನ್ನು ಕೊಟ್ಟಿದ್ದಾರೆ. ಅವರು ತೋರಿಸಿದಂತೆ ಬೇರೆ ಬೇರೆ ಜಿಲ್ಲೆಗಳ ಬ್ರಾಹ್ಮಣರ Index ನ್ನೂ, ನಮ್ಮ ನಾಡಿನ ತುಳು ಬ್ರಾಹ್ಮಣರ Index ನ್ನೂ, ಇತರ ಮುಖ್ಯ ಪಂಗಡಗಳ Index ನ್ನೂ ಪ್ರತ್ಯಪ್ರತ್ಯೇಕವಾಗಿ ಈ ಕೆಳಗಡೆ ಕೊಟ್ಟಿದೆ.

(ಮುಂದುವರಿಯುವುದು)

**'ತುಳುನಾಡಿನಲ್ಲಿ ಬ್ರಾಹ್ಮಣ್ಯ' ಈ ಪುಸ್ತಕ ಇಲ್ಲಿ ಲಭ್ಯ :**
**ಡಾ। ಪಾದೂರು ಗುರುರಾಜ ಭಟ್ ಮೆಮೋರಿಯಲ್ ಟ್ರಸ್ಟ್ (ರಿ.), #10-2-87B1, ಮೊದಲನೆಯ ಮಹಡಿ, ಎಸ್.ಎಮ್.ಎಸ್.ಪಿ. ಸಂಕೀರ್ಣ, ಸಂಸ್ಕೃತ ಕಾಲೇಜ್ ಬಳಿ, ಉಡುಪಿ-576101, ಕರ್ನಾಟಕ**

# ಧಾರ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ಶೃಂಗೇರಿ ಶ್ರೀಶಾರದಾ ಪೀಠದ ಕೊಡುಗೆ



- ಡಾ। ಎಚ್.ವಿ.ನರಸಿಂಹಮೂರ್ತಿ,
ವಿಶ್ರಾಂತ ಪ್ರಾಧ್ಯಾಪಕರು
ಕುಂದಾಪುರ-576 201.

(ಹಿಂದಿನ ಸಂಚಿಕೆಯಿಂದ)

ಬೆಂಗಳೂರಿನಲ್ಲಿ ಶೃಂಗೇರಿ ಶ್ರೀ ಶಾರದಾ ಪೀಠದ 'ಜ್ಞಾನೋದಯ ಶಾಲೆ' ಅತ್ಯಂತ ಜನಪ್ರಿಯವಾದುದು. ಈ ಶಿಕ್ಷಣ ಸಂಸ್ಥೆಯು ಪೂರ್ವ ಪ್ರಾಥಮಿಕ ಶಿಕ್ಷಣದಿಂದ ಪ್ರಾರಂಭಿಸಿ ಹತ್ತನೆಯ ತರಗತಿಯ ವರೆಗೆ ಸಿ.ಬಿ.ಎಸ್.ಇ. ಪಠ್ಯಕ್ರಮವನ್ನು ಬೋಧಿಸುವುದಲ್ಲದೆ, ಕರ್ನಾಟಕ ಸರಕಾರದ ಪಠ್ಯಕ್ರಮದಲ್ಲಿ ಪದವಿಪೂರ್ವ ಶಿಕ್ಷಣವನ್ನು ನೀಡುತ್ತದೆ. ಅದಲ್ಲದೆ ಸುಸಜ್ಜಿತವಾದ ಆಡಿಟೋರಿಯಂ, ಆಕ್ಟಿವಿಟಿ ಹಾಲ್, ಪುಸ್ತಕ ಭಂಡಾರಗಳು, ಪ್ರಯೋಗ ಶಾಲೆಗಳು, ದೊಡ್ಡ ಸಭಾಭವನ-ಇತ್ಯಾದಿಗಳನ್ನು ಹೊಂದಿರುವ ಈ ಸಂಸ್ಥೆಯು ಕಂಪ್ಯೂಟರ್ ಶಿಕ್ಷಣವನ್ನು ನೀಡುತ್ತಿದೆ. ಈ ಪ್ರಸಿದ್ಧ ಶಿಕ್ಷಣ ಸಂಸ್ಥೆಯಲ್ಲದೆ ಬೆಂಗಳೂರಿನಲ್ಲಿ ಉಮನ್ಸ್‌ಪೀಸ್‌ಲೀಗ್ ಶಾಲೆ, ಅಶೋಕ ಶಾಲೆ, ದೀಪಿಕಾ ಶಾಲೆ, ಕೈದಿಗಳ ಮಕ್ಕಳಿಗೆ ಉಚಿತ ಶಿಕ್ಷಣಕ್ಕಾಗಿ 'ಸೋಕೇರ್' ಎಂಬ ಮತ್ತೊಂದು ಸಂಸ್ಥೆ, ಶಿಶುವಿಹಾರ-ಹೀಗೆ ಅನೇಕ ಶಿಕ್ಷಣ ಸಂಸ್ಥೆಗಳು ಶ್ರೀಶಾರದಾ ಪೀಠದ ಆಶ್ರಯದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಮೈಸೂರು ನಗರದಲ್ಲೊಂದು ಪದವಿ ಪೂರ್ವ ಕಾಲೇಜು ಅಸ್ತಿತ್ವಕ್ಕೆ ಬರುತ್ತಿದೆ.

ಇವಲ್ಲದೆ ಶೃಂಗೇರಿಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಹೆಮ್ಮಕ್ಕಳ ಪ್ರೌಢಶಾಲೆ, ಬೆಳವಾಡಿಯ ಉದ್ಭವಗಣಪತಿ ಪ್ರೌಢಶಾಲೆ, ಮುಂಬಯಿಯ ಡೊಂಬಿವಿಲಿಯಲ್ಲಿರುವ ಜ್ಞಾನೋದಯ ಶಾಲೆ, ಚೆನ್ನೈನಲ್ಲಿರುವ ಭಾರತೀಯ ವಿದ್ಯಾಲಯ, ತಿರೂಪ್ಪೂರಿನಲ್ಲಿರುವ ಭಾರತೀತೀರ್ಥ ಸ್ಕೂಲ್-ಇವುಗಳೆಲ್ಲ ನಡೆಸುತ್ತಿರುವ ಶೈಕ್ಷಣಿಕ ಸೇವೆ ಪ್ರಶಂಸನೀಯವಾದುದು. ಶೃಂಗೇರಿ ಪೇಟೆಯ ಸಮೀಪದ ಒಂದು ಶಾಲೆಯನ್ನು ಶ್ರೀಮಠ ದತ್ತು ಸ್ವೀಕರಿಸಿ, ಶಾಲೆಯ ಅಧ್ಯಾಪಕರ ಸಂಬಳವೂ ಸೇರಿದಂತೆ ಅದರ ಎಲ್ಲ ಆರ್ಥಿಕಹೊಣೆಯನ್ನು ತಾನೇ ನಿರ್ವಹಿಸುತ್ತಿದೆ.

'ಸಾಕ್ಷರತೆ ಎಂದರೆ ಕಂಪ್ಯೂಟರ್ ಸಾಕ್ಷರತೆ' ಎಂದು ಪರಿಗಣಿಸುವ ಸ್ಥಿತಿಯನ್ನು ಇಂದು ನಾವು ತಲುಪಿದ್ದೇವೆ. ಇದನ್ನು ಮನಗಂಡ ಶೃಂಗೇರಿ ಶ್ರೀಶಾರದಾ ಪೀಠ ಶೃಂಗೇರಿ ನಗರದ ಹೃದಯ ಭಾಗದಲ್ಲಿ 'ವಿದ್ಯಾನಿಧಿ ಜ್ಞಾನಕೇಂದ್ರ' ಎಂಬ ಕಂಪ್ಯೂಟರ್ ಶಿಕ್ಷಣ ಸಂಸ್ಥೆಯೊಂದನ್ನು ಆರಂಭಿಸಿ, ಕಂಪ್ಯೂಟರ್ ಕಲಿಯಲು ಆಸಕ್ತಿ ಇರುವವರಿಗೆಲ್ಲ ಉಚಿತವಾಗಿ ಕಂಪ್ಯೂಟರ್ ಶಿಕ್ಷಣ ನೀಡುತ್ತಿದೆ. ಚಿಕ್ಕಮಗಳೂರು ಜಿಲ್ಲೆಯ ನೂರಾರು ಪ್ರೌಢಶಾಲೆಗಳಿಗೆ ಶ್ರೀಮಠದಿಂದ ಕಂಪ್ಯೂಟರ್‌ಗಳನ್ನು ' ಒದಗಿಸಲಾಗಿದೆ. ಚೆನ್ನೈನಲ್ಲಿರುವ ಕೆಲವು ಶಿಷ್ಯರು jagadgurus.org ಎಂಬ ವೈಬ್‌ಸೈಟನ್ನು ಅಳವಡಿಸಿ, ಜಗದ್ಗುರುಗಳವರ ಜೀವನ ಚರಿತ್ರೆ, ಅವರ ಉಪದೇಶಗಳು ಮತ್ತು ಶ್ರೀಮಠದ ಕುರಿತಾದ ಮಾಹಿತಿಗಳನ್ನು ಆಸಕ್ತರಿಗೆ ಒದಗಿಸುವ ಕಾರ್ಯವನ್ನು ಮಾಡಿದ್ದಾರೆ. ಇದೀಗ ಶ್ರೀಮಠವು www.sringerisharadapeetham.org ಎಂಬ ವೈಬ್‌ಸೆಟನ್ನು ನಿರ್ಮಿಸಿದ್ದು, ಅದರಲ್ಲಿ ಶ್ರೀಮಠಕ್ಕೆ ಸಂಬಂಧಿಸಿದ ಸಮಗ್ರ ಮಾಹಿತಿಗಳು ಲಭ್ಯವಾಗುತ್ತವೆ. info@sringerisharadapeetham.org ಎಂಬುದು ಶ್ರೀಮಠದ ಇಮೇಲ್ ವಿಳಾಸವಾಗಿದೆ.





'ಅದ್ವೈತ ರಿಸರ್ಚ್ ಸೆಂಟರ್' ಮತ್ತು 'ಅದ್ವೈತ ಶಾರದಾ ಪ್ರಾಜೆಕ್ಟ್'-ಇವು ಅನುಕ್ರಮವಾಗಿ ಅದ್ವೈತಕ್ಕೆ ಸಂಬಂಧಿಸಿದ ತಲಸ್ಪರ್ಶಿ ಸಂಶೋಧನೆ ಮತ್ತು ಶ್ರೀಮಠಕ್ಕೆ ಸಂಬಂಧಿಸಿದ ಅಪೂರ್ವ ದಾಖಲೆಗಳ ಸಂರಕ್ಷಣೆಗೆ ಸಂಬಂಧಿಸಿದ ಎರಡು ವಿಶಿಷ್ಟ ಯೋಜನೆಗಳು. ಡಿಜಿಟಲ್ ಲೈಬ್ರರಿಯನ್ನು ನಿರ್ಮಿಸಿ, ತನ್ಮೂಲಕ ಶೃಂಗೇರಿಯ ಗ್ರಂಥಭಂಡಾರ ಅಂತರ್ಜಾಲವನ್ನು ಸೇರುವಂತೆ ಮಾಡಿರುವುದಲ್ಲದೆ ಶ್ರೀಮಠದಲ್ಲಿ ನಡೆಯುವ ವಿದ್ವತ್ ಸಭೆ, ಶರನ್ನವರಾತ್ರಿ, ಶಂಕರಜಯಂತಿ, ಜಗದ್ಗುರುಗಳವರ ಪ್ರವಚನಗಳು-ಇವೆಲ್ಲವನ್ನೂ ಅಂತರ್ಜಾಲದಲ್ಲಿ ಹಾಕುವ ವ್ಯವಸ್ಥೆ ಇದೆ.

ಬೆಂಗಳೂರು ಶಂಕರಮಠದ ಆವರಣದಲ್ಲಿರುವ 'ಕಲ್ಪತರು ಸಂಶೋಧನಾ ಅಕಾಡೆಮಿ' ಉಲ್ಲೇಖಕ್ಕೆ ಪಾತ್ರವಾದ ಒಂದು ಪ್ರಾಚ್ಯ ವಿದ್ಯಾ ಸಂಶೋಧನಾ ಕೇಂದ್ರ. ಶ್ರೀಮಠದ ಆಶ್ರಯದಲ್ಲಿ ನಡೆಯುತ್ತಿರುವ ಈ ಸಂಸ್ಥೆ ವೇದ, ಶಾಸ್ತ್ರ ಆಗಮ, ಲಲಿತಕಲೆಗಳು ಮುಂತಾದ ಭಾರತೀಯ ವಿದ್ಯೆಗಳನ್ನು ಆಸಕ್ತರಿಗೆಲ್ಲ ತಲುಪಿಸುವ ಕಾರ್ಯದಲ್ಲಿ ಯಶಸ್ವಿಯಾಗಿದೆ. ಈ ಸಂಸ್ಥೆ ಪ್ರಕಟಿಸಿರುವ ನೂರಾರು ಪುಸ್ತಕಗಳು ಅಂತಾರಾಷ್ಟ್ರೀಯ ಮನ್ನಣೆ ಗಳಿಸಿವೆ. ಒಂದು ವಿಶ್ವವಿದ್ಯಾಲಯ ಮಾಡಬಹುದಾದ ಶೈಕ್ಷಣಿಕ ಕಾರ್ಯಗಳನ್ನು ಈ ಸಂಸ್ಥೆ ಅತ್ಯಂತ ಯಶಸ್ವಿಯಾಗಿ ನಿರ್ವಹಿಸುತ್ತಿದೆ. ಈ ಸಂಸ್ಥೆಯ ಸಮೀಪದಲ್ಲೇ ಇರುವ 'ವಿದ್ಯಾಭಾರತೀ ಪ್ರೆಸ್' ದಕ್ಷಿಣಾಮ್ನಾಯ ಶೃಂಗೇರಿ ಶ್ರೀಶಾರದಾ ಪೀಠದ ಆಂತರಿಕ ಪ್ರಕಾಶನ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ಶ್ರೀಮಠದ ಮತ್ತು ಆಸಕ್ತ ಶಿಷ್ಯರ ಅನೇಕ ಕೃತಿಗಳನ್ನು ಸೊಗಸಾಗಿ ಮುದ್ರಿಸುವ ಕಾರ್ಯದಲ್ಲಿ ಇದು ಸದ್ದಿಲ್ಲದೆ ತನ್ನನ್ನು ತೊಡಗಿಸಿಕೊಂಡಿದೆ. ಚಂದನ, ಈಟಿವಿ, ಶ್ರೀ ಶಂಕರ ಮೊದಲಾದ ದೂರದರ್ಶನ ಮಾಧ್ಯಮದವರು ಶೃಂಗೇರಿಯ ಶರನ್ನವರಾತ್ರಿ, ಶ್ರೀಗಳವರು ಪ್ರತಿನಿತ್ಯ ನಡೆಸುವ ಶ್ರೀಶಾರದಾ ಚಂದ್ರಮೌಳೀಶ್ವರ ಪೂಜೆ, ಶಂಕರ ಜಯಂತಿಯ ಕಲಾಪಗಳು ಇವನ್ನೆಲ್ಲ ಬಿತ್ತರಿಸುವ ಮೂಲಕ ಜನಸಾಮಾನ್ಯರೂ ತಮ್ಮ ಮನೆಗಳಲ್ಲೇ ಶೃಂಗೇರಿಯ ದರ್ಶನ ಮಾಡುವ ಸೌಕರ್ಯವನ್ನು ಒದಗಿಸಿಕೊಟ್ಟಿದ್ದಾರೆ.

ಒಂದು ರೀತಿಯ ಅನೌಪಚಾರಿಕ ಶಿಕ್ಷಣವನ್ನು ನೀಡುವ ಅನೇಕ ಚಟುವಟಿಕೆಗಳು ಶ್ರೀಮಠದಲ್ಲಿ ನಡೆಯುತಲೇ ಇರುತವೆ. ದೇಶದ ಶ್ರೇಷ್ಠ ವಿದ್ವಾಂಸರ ಸಂಗೀತ ಕಾರ್ಯಕ್ರಮಗಳು, ಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳು, ಹರಿಕತೆ, ಯಕ್ಷಗಾನ, ವೇದ, ಸಂಸ್ಕೃತ - ಇತ್ಯಾದಿಗಳಿಗೆ ಸಂಬಂಧಿಸಿದ ಚಟುವಟಿಕೆಗಳು, ಶ್ರೀಮಠದ ಆಶ್ರಯದಲ್ಲಿ ನಡೆಯುವ ಅನೇಕ ಸಂಸ್ಥೆಗಳ ವಾರ್ಷಿಕೋತ್ಸವಗಳು, ದೇಶದ ನಾನಾ ಭಾಗಗಳಲ್ಲಿ ನಡೆಯುವ ವಿಚಾರಗೋಷ್ಠಿಗಳು, ವಿದ್ವತ್ಸಭೆಗಳು ಇತ್ತೀಚೆಗೆ ಹೊರಬರುತ್ತಿರುವ ಅತ್ಯುತ್ತಮ ಸಿ.ಡಿ.ಗಳು-ಹೀಗೆ ಶೃಂಗೇರಿ ಶ್ರೀಶಾರದಾಪೀಠದ ಶಿಕ್ಷಣ ವ್ಯಾಪ್ತಿ ತುಂಬಾ ವಿಸ್ತಾರವಾದುದು.

(ಮುಂದುವರಿಯುವುದು)

Krishna Rao
Ph :2520652
Mob. :9902029048
KISHAN
Studio & Video


Indoor Photography & Port Folio Photography,
Video & Mixing, Lamination
MAIN ROAD, MAJOOR & BANTAKAL.



RAJESH POWER PRESS
PRINTERS & PUBLISHERS
DARBE, PUTTUR, DA. KA. -574 202.
KARNATAKA STATE, SOUTH INDIA.
Ph :(08251) 231696, 231697 & 322386
E-mail :msraghunathrao@hotmail.com
QUALITY FIRST AND ALWAYS

# ನಾ ಕಂಡ ಸಿಂಗಾಪುರ



ಪ್ರಮೋದ್ ಮಾರ್ಪಳ್ಳಿ
ಶಿವಮೊಗ್ಗ

ಎಕ್ಸ್‌ಚೇಂಜಿಂಗ್‌ನಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆದ ನಾನು ಮತ್ತು ನನ್ನ ಸಹೋದ್ಯೋಗಿಗಳಿಗೆ ಸಿಂಗಾಪುರದಲ್ಲಿ ಕಂಪೆನಿಯ ಕಾರ್ಯನಿಮಿತ್ತ ಹೋಗುವ ಸದವಕಾಶವೊದಗಿತು. ಪುಸಕದಲ್ಲಿ, ಟಿ.ವಿ., ಸಿನಿಮಾಗಳಲ್ಲಿ ಸಿಂಗಾಪುರವನ್ನು ಕೇಳಿದ್ದ, ಕಂಡಿದ್ದ ನಮಗೆ ಪ್ರತ್ಯಕ್ಷವಾಗಿ ನೋಡುವ ಅವಕಾಶ ಒದಗಿದಕ್ಕಾಗಿ ಕಂಪನಿಗೆ ಧನ್ಯವಾದ ಹೇಳುತ್ತಾ ಬೆಂಗಳೂರಿನ ಏರ್‌ಪೋರ್ಟ್‌ನಲ್ಲಿ ವಿಮಾನ ಹತ್ತಿದೆವು.

ಬೆಳ್ಳಂಬೆಳಗ್ಗೆ ಸಿಂಗಾಪುರ ಬೃಹತ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿದಾಗ ನಮ್ಮಲ್ಲಿ ಕುತೂಹಲ, ಆಶ್ಚರ್ಯ, ಕಾತರ ಒಮ್ಮೆಲೆ ಮೂಡಿತು. ಚೆಂಗಾಯಿ ಏರ್‌ಪೋರ್ಟ್‌ನಿಂದ ನಮಗಾಗಿ ಕಂಪನಿಯವರು ನೀಡಿದ್ದ ಅತಿಥಿ ಗೃಹಕ್ಕೆ ಗುಂಡಿ ತಗ್ಗುಗಳಿಲ್ಲದ ಕಾಂಕ್ರೀಟ್‌ನ ಸ್ವಚ್ಛವಾದ ರಸ್ತೆಯಲ್ಲಿ ಹೋಗುವಾಗ ಅಕ್ಕಪಕ್ಕದಲ್ಲಿನ ಬೃಹತ್ ಕಟ್ಟಡಗಳು ನನ್ನನ್ನು ಆಕರ್ಷಿಸಿತು.

ನಾನು ಇದ್ದದ್ದು 1 ತಿಂಗಳಾದರೂ ಈ ಪುಟ್ಟ ದೇಶ ಸಾಧಿಸಿದ ಅಭಿವೃದ್ಧಿ-ಪ್ರಗತಿ ನೋಡಿ ದಿಗ್ಭ್ರಮೆಯು ಆಯಿತು. ಎಲ್ಲಿ ನೋಡಿದರಲ್ಲಿ ಸ್ವಚ್ಛತೆ, ಗಗನಚುಂಬಿ ಕಟ್ಟಡಗಳು ಆಧುನಿಕತೆಯ ಫ್ಲೈಯ್ ಓವರ್‌ಗಳು, ಗಿಡಮಗಳ ಹಸಿರು ತಾಣಗಳು ಕಣ್ಮನ ಸೆಳೆದವು.

ಸಿಂಗಾಪುರವನ್ನು ಇಂಗ್ಲೀಷ್‌ನಲ್ಲಿ ಮಲಯ್ ಸಿಂಗಾಪುರ (ಸಂಸ್ಕೃತದಲ್ಲಿ ಸಿಂಹಪುರ ಲಯನ್ ಸಿಟಿ) ಎಂದು ಕರೆಯಲಾಗಿದೆ. ಇಲ್ಲಿನ ಭಾಷೆ ವ್ಯವಹಾರಿಕ ಭಾಷೆ ಮಲಯ್. ಇದರೊಂದಿಗೆ ಇಂಗ್ಲೀಷ್, ಚೈನೀಸ್ ಮತ್ತು ತುಮಿಳು ಭಾಷೆಯನ್ನು ಆಡುವ ಜನರಿದ್ದಾರೆ. ಬೌದ್ಧ ಮತಾವಲಂಬಿಗಳು ಹೆಚ್ಚು ಜನರಿದ್ದು ಕ್ರಿಶ್ಚಿಯನ್, ಇಸ್ಲಾಂ, ತಯಿಸಿಮ್, ಹಿಂದೂಗಳು ಮತ್ತು ಯಾವುದೇ ಧರ್ಮಕ್ಕೆ ಸೇರದ ಎಲ್ಲಾ ಧರ್ಮಾವಲಂಬಿಗಳನ್ನು ಹೊಂದಿದ ಸುಂದರ ಹೂತೋಟ ಸಿಂಗಾಪುರ.

ಪ್ರಪಂಚದ ಪುಟ್ಟ ರಾಷ್ಟ್ರಗಳಲ್ಲಿ ಒಂದಾದ ಸಿಂಗಾಪುರ ಅಭಿವೃದ್ಧಿ ಪಥದಲ್ಲಿ ಸಾಗಿರುವುದು ಇತರ ರಾಷ್ಟ್ರಗಳಿಗೂ ಮಾದರಿಯಾಗಿದೆ. ಕಾನೂನು ಶಾಂತಿ ವ್ಯವಸ್ಥೆಗೆ ಹೆಸರಾಗಿದೆ. ಯಾವುದಾದರೂ ವ್ಯವಹಾರದಲ್ಲಿ ಮೋಸ ಅಥವಾ ನ್ಯೂನತೆಗಳು ಕಂಡು ಬಂದರೆ ಅಂತಹವರ ವಿರುದ್ಧ ತಕ್ಷಣವೇ ಅಲ್ಲಿ ಕಾನೂನು ಕ್ರಮ ಕೈಗೊಳ್ಳುವ ವ್ಯವಸ್ಥೆ ಇದೆ.

ಸಿಂಗಾಪುರ ಪ್ರಖ್ಯಾತಿಯಾಗಿರುವುದೇ ಅಲ್ಲಿನ ಪ್ರವಾಸೋದ್ಯಮದಿಂದ. ಎಷ್ಟು ನೋಡಿದರೂ ಮತ್ತಷ್ಟು ನೋಡಬೇಕೆನಿಸುವ ಅದ್ಭುತ ರೋಮಾಂಚಕಾರಿ ಸುಂದರ ತಾಣಗಳಿವೆ. ಚೆಂಗಾಯಿ ಏರ್‌ಪೋರ್ಟ್‌ನಿಂದ ಟ್ಯಾಕ್ಸಿಯಲ್ಲಿ 15 ನಿಮಿಷದ ಅಂತರದಲ್ಲಿ ಸ್ಕೈ ಪಾರ್ಕ್ ಇದೆ. ಈ ಸ್ಕೈ ಪಾರ್ಕಿನ ವಿಶೇಷವೆಂದರೆ 57 ಫ್ಲೋರ್‌ಗಳ ಎತ್ತರದ ಮೇಲೆ ಇರುವ ಈಜುಕೊಳ, ಹೋಟೆಲ್ ನಮ್ಮನ್ನು ಆಕರ್ಶಿಸುತ್ತದೆ. ಇದೊಂದು ವಿಶೇಷ ಸ್ಥಳ. ಇಲ್ಲಿಂದ ಸಿಂಗಾಪುರವೇ ಕಾಣಿಸುತ್ತದೆ. ಸಮುದ್ರದಲ್ಲಿ ಬರುವ ಹಡಗುಗಳು, ದೋಣಿಗೆಳು ಸಣ್ಣ ಆಡುವ ಪುಟ್ಟ ಪುಟ್ಟ ಗೊಂಬೆಗಳಂತೆ ಕಾಣುತ್ತದೆ. ಬಾಲ್ಯದಲ್ಲಿ ನಾವು ಕಾಗದದಲ್ಲಿ ದೋಣಿಗಳನ್ನು ಮಾಡಿ ನೀರಿನಲ್ಲಿ ಬಿಟ್ಟು ಆಟವಾಡುತ್ತಿದ್ದ ನೆನಪು ಸ್ಕೈಪಾರ್ಕ್‌ನ ಮೇಲೆ ನಿಂತು ನೋಡಿದಾಗ ಕಾಣುವ ಹಡಗುಗಳೇ ಪುಟ್ಟದಾಗಿ ಕಂಡು ಬಾಲ್ಯ ನೆನಪನ್ನು ಮರುಕಳಿಸಿತು.

ಚೈನೀಸ್ ಟೌನ್‌ನಿಂದ ಟ್ಯಾಕ್ಸಿಯಲ್ಲಿ 5 ನಿಮಿಷ ಕ್ರಮಿಸಿದರೆ ಮೇರನಬ್ಬೆ ಕಾಣಿಸುತ್ತದೆ. ಬೃಸತ್ ಗಗನಚುಂಬಿ ಕಟ್ಟಡಗಳು, ಇದರಲ್ಲಿ ಅನೇಕ ಕಂಪನಿಯ ಕಛೇರಿಗಳಿವೆ. ಇದರ ಎದುರಿಗೆ ಸಿಂಗಾಪುರದ ಲಾಂಛನ ಸಿಂಹದ ಬಾಯಿಂದ ಚಿಮ್ಮುವ ನೀರಿನ ಚಿಲುಮೆ ನೋಡಲು ಆಕರ್ಷಣೀಯ. ಎಷ್ಟೊಂದು ಪ್ರವಾಸಿಗಳು ಬರುತ್ತಿದ್ದರೂ ಅಲ್ಲಿನ ನೈರ್ಮಲ್ಯ ಸ್ವಚ್ಛತೆ ನಿಜಕ್ಕೂ ಅಚ್ಚರಿ ಹುಟ್ಟಿಸುತ್ತದೆ. ಸಿಂಗಾಪುರದಲ್ಲಿ ನಾವು ನೋಡಿದ ಮತ್ತೊಂದು ಮಯಾಲೋಕ ಸಂತೋಷದ ಅಂಡರ್‌ವರ್ಲ್ಡ್ ಪಾರ್ಕ್. ಇಲ್ಲಿ ಕೃತಕವಾಗಿ ಮಾನವ ನಿರ್ಮಿತ ಸಮುದ್ರದ ಆಳದಲ್ಲಿ ಒಳಗೆ ಹೋಗುವ ಅದ್ಭುತ ರೋಮಾಂಚನಕಾರಿ ಅನುಭವಾಗುತ್ತದೆ. ಗ್ಲಾಸ್‌ನ ಹೊರಗೆ ಕಾಣುವ ವಿವಿಧ ರೀತಿಯ ಜಲಚರಗಳು, ಮೀನುಗಳು ನಮ್ಮ ಮೇಲೆಯೆ ಬಂದಂತೆ ಅನಿಸುತ್ತದೆ. ಸಮುದ್ರಕ್ಕೆ ಆಳಕ್ಕೆ ಹೋದ ಅನುಭವ, ಸಂತೋಷ, ಸಂಭ್ರಮ ನಮ್ಮದಾಗುತ್ತದೆ. ಹೊರಗೆ ಬಂದಾಗ ನಮ್ಮನ್ನು ಆಕರ್ಷಿಸಿದ್ದೇ ಡಾಲ್ಫಿನ್ ಶೋ. ಡಾಲ್ಫಿನ್, ಸೀಲ್‌ಗಳ ಆಟ ಹಾರಾಟ ಮಕ್ಕಳಿಂದ ಹಿಡಿದು ವೃದ್ಧರವರೆಗೂ ಕೊಡುವ ಖುಷಿಯೇ ಹೇಳಲು ಅಸಾಧ್ಯ. ಅವುಗಳನ್ನು ನೋಡುತ್ತಾ ನಿಂತಾಗ ನನ್ನನ್ನು ನಾನೇ ಮರೆತು ಹೋದೆನು.


ಸಿಂಗಾಪುರದಲ್ಲಿರುವ ಲಿಟಲ್ ಇಂಡಿಯಾಕ್ಕೆ ಭೇಟಿ ನೀಡಿದಾಗ ನಾವು ನಮ್ಮ ನೆಲದಲ್ಲಿದ್ದಂತೆ ಭಾಸವಾಗುತ್ತದೆ. ಅಲ್ಲಿ ನಮ್ಮ ಸಂಸ್ಕೃತಿ, ಆಹಾರ, ನಡೆನುಡಿಗಳನ್ನು ಬಿಂಬಿಸುವ ನಮ್ಮ ದೇಶದ ವಸುಗಳನ್ನು ಮಾರಾಟ ಮಾಡುವ, ಕೊಳ್ಳುವ ಸಂಭ್ರಮ ನನಗಾಯಿತು. ಅದರಲ್ಲೂ ನಾನಿದ್ದದ್ದು ದೀಪಾವಳಿ ಹಬ್ಬದ ಸಮಯ. ಬಗೆ ಬಗೆಯ ದೀಪದ ಅಲಂಕಾರ, ಹಣತೆಗಳು ಬಾಳೆ ಕಂಬದ ತೋರಣ ಕಂಡು ನನ್ನ ದೇಶದಲ್ಲಿನ ಸಂಸ್ಕೃತಿ ಇಲ್ಲಿ ವಿಜೃಂಭಿಸಿದ್ದು ನೋಡಿ ನನಗೆ ಹೆಮ್ಮೆ ಎನಿಸಿತು.

ಸಿಂಗಾಪುರದಲ್ಲಿದ್ದ ಬೌದ್ಧ ದೇವಾಲಯ ಗಳು, ಚರ್ಚ್‌ಗಳು, ಮಸೀದಿಗಳು ನಮ್ಮ ಹಿಂದು ದೇವಾಲಯಗಳು ಕಾಣಸಿಗುತ್ತವೆ. ಅದರಲ್ಲೂ ಲಯನ್ ಸಿದ್ಧವಿನಾಯಕ ಎಂತವರನ್ನು ಆಕರ್ಶಿಸದೇ ಬಿಡದು. ಅಲ್ಲಿ ನಡೆಯುವ ಮಂತ್ರಘೋಷ ಪೂಜ ಕ್ರಮಗಳು ನಮ್ಮನ್ನು ಭಕ್ತಿ ತಲ್ಲೀನರಾಗುವಂತೆ ಮಾಡುತ್ತದೆ. ಇಲ್ಲೊಂದು ವಿಶೇಷವೆಂದರೆ ಎಲ್ಲಾ ಮತದವರು, ಜನಾಂಗದವರು ಈ ಸಿದ್ಧಿವಿನಾಯಕ ದೇವಾಲಯಕ್ಕೆ ಭಕ್ತಿಯಿಂದ ನಡೆದುಕೊಳ್ಳುತ್ತಾರೆ ಎಂದು ಅಲ್ಲಿನ ಅರ್ಚಕರೇ ಹೆಮ್ಮೆಯಿಂದ ಹೇಳುತ್ತಾರೆ.

ಸಿಂಗಾಪುರದಲ್ಲಿ ಪ್ರವಾಸಕ್ಕೆ ಇರುವ ಸೌಕರ್ಯ ಅಗಣಿತ. ಟ್ಯಾಕ್ಸಿ, ಎಂ.ಆರ್.ಟಿ. ಬಸ್‌ಗಳು ಎಲ್ಲವೂ ಅತ್ಯಾಧುನಿಕವಾದದ್ದು. ನಿಗದಿತ ದರ, ಹೊಸಬರಿರಲಿ, ಹಳಬರಿರಲಿ ಇಲ್ಲಿ ವಂಚನೆ ಮಾಡುವ ಪ್ರವೃತ್ತಿ ಕಾಣಲಿಲ್ಲ.

ಸಿಂಗಾಪುರ ಪ್ರವಾಸೋದ್ಯಮದಲ್ಲಿ, ವ್ಯವಹಾರದಲ್ಲಿ, ಅಭಿವೃದ್ಧಿಯಲ್ಲಿ ಸಾಧಿಸಿದ ಪ್ರಗತಿ ಮೆಚ್ಚುವಂತದ್ದು. ಸಿಂಗಾಪುರದಿಂದ ಭಾರತಕ್ಕೆ ಮರಳುವಾಗ ನನಗನಿಸಿದ್ದು ಇಷ್ಟೆ. ನಮ್ಮ ದೇಶದಲ್ಲಿ ಎಲ್ಲವೂ ಇದೇ. ಪ್ರಕೃತಿ, ಸಂಪತ್ತು ಸೌಲಭ್ಯಗಳಿವೆ, ಬುದ್ಧಿವಂತಿಕೆಗಳಿವೆ. ನಾವೇಕೆ ನಮ್ಮ ದೇಶವನ್ನು ಸಿಂಗಾಪುರ ಅಥವಾ ಅದಕ್ಕಿಂತಲೂ ಹೆಚ್ಚು ಪ್ರವಾಸೋದ್ಯಮ ಬೆಳೆಸಿ ಅಭಿವೃದ್ಧಿ ಪಥದಲ್ಲಿ ಮುನ್ನಡೆಸಬಾರದು ಎಂದೆನಿಸಿತು. ನೀವು ಈ ದೇಶಕ್ಕೆ ಬಂದು, ಮರಳಿ ಹೋಗುವಾಗ ನಿಮಗೂ ಹೀಗೆ ಅನಿಸಬಹುದು.




# ಶಂಕರ ಪ್ರತಿಷ್ಠಾನ ಕಾರ್ಕಳ : ರಜತಮಹೋತ್ಸವ





ಶಂಕರ ಪ್ರತಿಷ್ಠಾನ ಕಾರ್ಕಳ ಇದರ ವಾರ್ಷಿಕ ಮಹಾಸಭೆ ಹಾಗೂ ಬೆಳ್ಳಿಹಬ್ಬದ ಆಚರಣೆಯು ದಿನಾಂಕ 30-10-2011ರಂದು ಹಿರಿಯಂಗಡಿ ಶ್ರೀ ಮಹಾವೀರಭವನದಲ್ಲಿ ನಡೆಯಿತು. ಪೂರ್ವಾಹ್ನ 9-30ರಿಂದ ನಾಗಪೂಜೆ ಹಾಗೂ ಸ್ಥಳದೇವತೆ ವೀರಬ್ರಹ್ಮ ಯಕ್ಷಿಯರ ಪೂಜೆಯು ಸಮಾರಂಭಕ್ಕೆ ಆಧ್ಯಾತ್ಮಿಕ ಮೆರಗನ್ನು ನೀಡಿತು. ಉಡುಪಿ ಸಂಘದ ಅಧ್ಯಕ್ಷರಾದ ನಿವೃತ್ತ ಡಿ.ಜಿ.ಎಂ. ಮಾನ್ಯ ಶ್ರೀ ಸಿ.ಸರ್ವೋತಮರಾಯರು ದೀಪ ಬೆಳಗಿಸಿ ಶುಭ ಹಾರೈಸಿದರು. ವೇದಿಕೆಯಲ್ಲಿದ್ದ ಇತರರೂ ಸಹಕರಿಸಿದರು. ಆರಂಭದ ಒಂದು ಗಂಟೆ ಅವಧಿಯಲ್ಲಿ ಪ್ರತಿಷ್ಠಾನದ ಮಹಿಳಾ ವಿಭಾಗದವರು ವಿವಿಧ ಕಾರ್ಯಕ್ರಮಗಳ ನ್ನಿತ್ತರು. ಕುಮಾರಿ ಶ್ರುತಿ ಬಿ.ರಾವ್ ಪುಷ್ಪಾಂಜಲಿ ಹಾಗೂ ಜಿಲ್ಲಾಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದ ಭಜಗೋವಿಂದಂ ನೃತ್ಯಗಳನ್ನು ಪ್ರಸುತಪಡಿಸಿ ದರು. ಎಳೆಯ ಪ್ರತಿಭೆಗಳಾದ ಕುಮಾರಿ ಯರಾದ ಸಿಂಚನ ಹಾಗೂ ಸುಪ್ರಿಯಾರವರು ನೃತ್ಯಾಭಿನಯಗಳಿಂದ ಮನ ಸೂರೆಗೊಂಡರು. ಶ್ರೀಮತಿ ಸುಮನ ಮತ್ತು ಕುಮಾರಿ ಅನುರಾಧ ಸಂಗೀತ ಕಾರ್ಯಕ್ರಮಗಳನ್ನಿತ್ತರು. ಶ್ರೀಮತಿ ಸಾವಿತ್ರಿ ಮನೋಹರ್‌ರವರು ರಚಿಸಿದ "ಶಂಕರ ಸನ್ಯಾಸ" ರೂಪಕವನ್ನು ಶ್ರೀ ಭವಾನಿ ಶಂಕರ ಕುಟುಂಬದವರೂ ಹಾಗೂ ಕುಮಾರ್ ಶ್ರೇಯಸ್ ಶರ್ಮ ನಿಟ್ಟೆ ಅಭಿನಯಿಸಿ ಜನಮೆಚ್ಚುಗೆ ಗಳಿಸಿದರು. ಶ್ರೀಮತಿ ವನಜ ಆರ್.ರಾವ್‌ರವರು ರಚಿಸಿದ 'ಚುನಾವಣಾ ರಂಗು' ಎಂಬ ಪ್ರಹಸನವನ್ನು ಪ್ರತಿಷ್ಠಾನದ ಮಹಿಳಾ ಸದಸ್ಯೆಯರೂ ಅಭಿನಯಿಸಿ ಅತಿಥಿ ಗಳಿಂದ ಪ್ರಂಶಸೆ ಗಳಿಸಿದರು.

ಶ್ರೀಮತಿ ಸೌಮ್ಯ ಬಿ.ರಾವ್ ಮತ್ತು ಕುಮಾರಿ ಶ್ರುತಿ ಬಿ.ರಾವ್‌ರವರ ಪ್ರಾರ್ಥನೆ ಯೊಂದಿಗೆ ಸರ್ವಸದಸ್ಯರ ಸಭೆ ಆರಂಭ ವಾಯಿತು. ವೇದಿಕೆಯಲ್ಲಿ ಅಧ್ಯಕ್ಷರು ಶ್ರೀರಾಮ ಮೋಹನರಾಯರು, ಅತಿಥಿಗಳಾದ ಶ್ರೀ ನಂದಳಿಕೆ ಬಾಲಚಂದ್ರರಾವ್, ಶ್ರೀಮತಿ ಸುನಂದಾ ರಾವ್ ಮತ್ತು ವೇದಮೂರ್ತಿ ಶ್ರೀ ದಿವಾಕರ ಭಟ್ಟರು ಉಪಸ್ಥಿತರಿದ್ದರು. ಮಹಿಳಾ ವಿಭಾಗದ ಅಧ್ಯಕ್ಷೆ ಶ್ರೀಮತಿ ಶೈಲಜಾ ರತ್ನಾಕರ ರಾಯರು ಸ್ವಾಗತಿಸಿದರು. ಪ್ರತಿ ಷ್ಠಾನದ 2010-11ರ ವರದಿಯನ್ನು ಕಾರ್ಯದರ್ಶಿ ಶ್ರೀ ವಾಸುದೇವ ರಾಯರು ವಾಚಿಸಿ ಸಭೆಯಿಂದ ಮಂಜೂರಾತಿ ಪಡೆದರು. ಪ್ರತಿಷ್ಠಾನದ 2010-11ರ ಆಯವ್ಯಯ ಪಟ್ಟಿಯನ್ನು ಕೋಶಾಧಿಕಾರಿ ಶ್ರೀ ಕೆ.ರತ್ನಾಕರ ರಾಯರು ಓದಿ ಹೇಳಿ ಮಂಜೂರಾತಿ ಪಡೆದರು.

ಪ್ರತಿಷ್ಠಾನವು ಕಬ್ಬಿನಾಲೆಯ ಪ್ರತಿಷ್ಠಿತ ಕುಟುಂಬದ ಹಿರಿಯ ವ್ಯಕ್ತಿ ಕೃಷ್ಣಯ್ಯ ಹೆಬ್ಬಾರರು, ಬಜಗೋಳಿ ಅಕ್ಷಯ ಜ್ಯೂಸ್ ಸೆಂಟರಿನ ಮಾಲಕ ಶ್ರೀ ಉಮೇಶ್‌ರಾಯರ ತಂದೆ ಹಿರಿಯ ವ್ಯಕ್ತಿ ಶ್ರೀ ಕೆ. ಶ್ರೀನಿವಾಸ ರಾವ್, ನಂದಳಿಕೆಯ ನಾಟಿ ವೈದ್ಯೆ ಶ್ರೀಮತಿ ಶಾಂತ ಎಸ್.ರಾವ್ ಹಾಗೂ ಜಿಲ್ಲಾ ಉತಮ ಶಿಕ್ಷಕಿ ಪ್ರಶಸ್ತಿ ಪಡೆದ ಶ್ರೀಮತಿ ಸುಮನಾ ಜೆ.ರಾವ್ ಇವರನ್ನು ಶಾಲು ಹೊದೆಸಿ, ಫಲಪುಷ್ಪ, ಸನ್ಮಾನ ಪತ್ರ ಸ್ಮರಣಿಕೆಯೊಂದಿಗೆ ಸನ್ಮಾನಿಸಲಾಯಿತು. ಸನ್ಮಾನವನ್ನು ವೇದಿಕೆಯ ಗಣ್ಯರೆಲ್ಲರೂ ಮಾಡಿ ಶುಭವನ್ನು ಹಾರೈಸಿದರು. ಶ್ರೀಮತಿ ಸಾವಿತ್ರಿ ಮನೋಹರರು ರಚಿಸಿದ ಶ್ರೀಮತಿ ನಾಗಮ್ಮ ಹಂದಿಗೋಡುರವರ ಜೀವನಗಾಥೆ 'ನೆನಪಿನಂಗಳ' ಪುಸಕವನ್ನು ಶ್ರೀ ಮನೋಹರ್ ರಾವ್ ವೇದಿಕೆಯ ಗಣ್ಯರೆಲ್ಲರಿಗೂ ನೀಡಿದರು. ಅನಂತರ 2011ರ ಮಾರ್ಚ್‌ನ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷೆಯಲ್ಲಿ 90%ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳನ್ನು ನಗದು ಪುರಸ್ಕಾರದೊಂದಿಗೆ ಸನ್ಮಾನಿಸಲಾಯಿತು.

ಶ್ರೀ ಭವಾನಿ ಶಂಕರರಾಯರಿಂದ ಪರಿಚಯಿಸಲಟ್ಟ ಶ್ರೀ ಹೆಚ್.ದಿವಾಕರ ಭಟ್ಟರು ಶ್ರೀ ಜಗದ್ಗುರುಗಳ ಪ್ರೇರಣೆಯಂತೆ ಜನ್ಮ ತಾಳಿದ ಈ ಪ್ರತಿಷ್ಠಾನವು ಉತ್ತಮ ಸಂಘಟನೆ ಯನ್ನು ಹೊಂದಿ ಧಾರ್ಮಿಕ ಕಾರ್ಯಕ್ರಮ ಗಳನ್ನು ಶಾಸ್ತ್ರೋಕವಾಗಿ ಮಾಡಲೆಂದು ಹಾರೈಸಿದರು. ಶ್ರೀ ನಂದಳಿಕೆ ಬಾಲಚಂದ್ರ ರಾಯರನ್ನು ಶ್ರೀ ಕೆಮ್ಮಣ್ಣು ಅನಿಲ್‌ಕುಮಾರರು ಪರಿಚಯಿಸಿದರು. ಶ್ರೀ ಬಾಲಚಂದ್ರರಾಯರು ಪ್ರತಿಷ್ಠಾನವು ವ್ಯಕಿತ್ವ ವಿಕಸನದೊಂದಿಗೆ ಮುಂದಿನ ಪೀಳಿಗೆಗೂ ಮಾರ್ಗದರ್ಶನ ಮಾಡಿ ಅವರ ವ್ಯಕಿತ್ವ ವಿಕಸನಕ್ಕೆ ಅನುವು ಮಾಡಲೆಂದು ಹಾರೈಸಿದರು. ಶ್ರೀಮತಿ ಸುನಂದ ಎಸ್.ರಾವ್ ರನ್ನು ಶ್ರೀಮತಿ ವತಲಾ ಶ್ಯಾನುಭಾಗರು ಪರಿಚಯಿಸಿದರು. ಈ ಅತಿಥಿಗಳು ಮಹಿಳೆ ಯರು ಪ್ರತಿಷ್ಠಾನದ ಕಾರ್ಯಕ್ರಮದಲ್ಲಿ ಸಕ್ರಿಯ ವಾಗಿ ಭಾಗವಹಿಸಿ ಉತಮ ಹೆಸರನ್ನು ಪ್ರತಿಷ್ಠಾನಕ್ಕೆ ತಂದಿದ್ದಾರೆಂದು ಹೇಳಿ ಶುಭ ಹಾರೈಸಿದರು. ಅಧ್ಯಕ್ಷರ ಭಾಷಣದ ನಂತರ ನಕ್ರೆ ಶಿವರಾಯರು ಧನ್ಯವಾದವಿತ್ತರು. ಬೆಳಗಿನ ಕಾರ್ಯಕ್ರಮವನ್ನು ಶ್ರೀಮತಿ ಸಾವಿತ್ರಿ ಮನೋಹರ್ ನಿರ್ವಹಿಸಿದರು.

ಲೆಕ್ಕಪರಿಶೋಧಕ ಶ್ರೀ ರಮೇಶರಾಯರ ಪ್ರಾಯೋಜಕತ್ವದಲ್ಲಿ ದಿನದುದ್ದಕ್ಕೂ ಉತಮ ವಾದ ತಿಂಡಿ, ಪಾನೀಯ ಹಾಗೂ ಭೋಜನ ಸದಸ್ಯರನ್ನು ಸಂತುಷ್ಟಗೊಳಿಸಿದವು. ಭೋಜನವಂತೂ ಸ್ವಾದಿಷ್ಟ ವಾಗಿತ್ತು. ಅವರನ್ನು ಸಭೆಯಲ್ಲಿ ಗೌರವಿಸ ಲಾಯಿತು.

ಅಪರಾಹ್ನದ ಕಾರ್ಯಕ್ರಮದಲ್ಲಿ ವಿದ್ಯುನ್ಮತಿ ಕಲ್ಯಾಣ ಎಂಬ ಯಕ್ಷಗಾನವು ಲೆಕ್ಕಪರಿಶೋಧಕ ರಾದ ಶ್ರೀ ವಾಸುದೇವರಾಯರಿಂದ ಪ್ರಾಯೋಜಿಸಲ್ಪಟ್ಟಿತ್ತು. ಪ್ರತಿಷ್ಠಾನದ ಅಧ್ಯಕ್ಷರು ಅಧ್ಯಕ್ಷತೆ ವಹಿಸಿದ್ದ ಈ ಕಾರ್ಯಕ್ರಮವು ಉತ್ತಮವಾಗಿ ಮೂಡಿಬಂತು.

ಶ್ರೀ ಗಣಪತಿ ಪೂಜಾನಂತರ ಯಕ್ಷಗಾನದ ಪೂರ್ವರಂಗವನ್ನು ಹಾಗೂ ಹೊಗಳುಭಟನ ಪಾತ್ರವನ್ನು ಪರಿಚಯಿಸಿದುದು ವಿಶೇಷ ವಾಗಿತು. ಹತ್ತು ಹನ್ನೆರಡು ವರ್ಷದ ಚಿ| ಸರ್ವೇಶ್ ಮತ್ತು ಸರ್ವಜಿತ್‌ರವರ ಬಾಲ ಗೋಪಾಲ ನೃತ್ಯವು ಎರಡು ಮುಖ್ಯ ಸ್ತ್ರೀ ವೇಷಗಳು ಪೂರ್ವರಂಗದ ಆಕರ್ಷಣೆ ಯಾಗಿದ್ದವು. ಇವು ಸಾಂಪ್ರದಾಯಿಕ ಯಕ್ಷಗಾನ ಪರಂಪರೆಯನ್ನು ನೆನಪಿಸಿದವು. ತೆಂಕು ಹಾಗೂ ಬಡಗು ತಿಟ್ಟಿನ ದ್ವಂದ್ವ ಹಿಮ್ಮೇಳದಲ್ಲಿ ಯಕ್ಷಗಾನ ಕಾರ್ಯಕ್ರಮವು ಸಂಪನ್ನ ಗೊಂಡಿತು. ಶ್ರೀ ವಾಸುದೇವರಾಯರು ದೇವೇಂದ್ರನ ಪಾತ್ರದಲ್ಲಿ, ಶ್ರೀ ವಸಂತರು ಕಾಲಜಂಘನ ಪಾತ್ರದಲ್ಲಿ, ಶ್ರೀ ಮಹಾವೀರ ಪಾಂಡೆಯವರು ನಾರದನ ಪಾತ್ರದಲ್ಲಿ ಹಾಗೂ ಇತರರು ತೆಂಕು ಹಾಗೂ ಬಡಗುತಿಟ್ಟಿನ ವೇಷಗಳಲ್ಲಿ ಕಾರ್ಯಕ್ರಮಕ್ಕೆ ಮೆರುಗನ್ನಿತ್ತರು. ಕಾರ್ಯಕ್ರಮದ ಪ್ರಾಯೋಜಕರಾದ ಶ್ರೀ ವಾಸುದೇವರಾಯರು ಧನ್ಯವಾದವಿತ್ತು ಕಲಾವಿದರಿಗೆ ಸ್ಮರಣಿಕೆಗಳನ್ನಿತ್ತು ಗೌರವಿಸಿದರು. ಅಪರಾಹ್ನದ ಕಾರ್ಯಕ್ರಮವನ್ನು ಮಹಿಳಾ ವಿಭಾಗದ ಕಾರ್ಯದರ್ಶಿ ಶ್ರೀಮತಿ ಶೈಲಜಾ ರಮೇಶ್‌ರಾವ್ ನಿರ್ವಹಿಸಿದರು.

ಪ್ರತಿಷ್ಠಾನದ ಬೆಳ್ಳಿಹಬ್ಬವನ್ನು ಸಂಭ್ರಮದಿಂದ ಆಚರಿಸಬೇಕೆಂಬ ಸದಸ್ಯರ ಆಶಯವು ಪ್ರಾಯೋಜಕರ ಹಾಗೂ ಸರ್ವಸದಸ್ಯರ ಉತಮ ಸಹಕಾರದಿಂದ ಸಂಪನ್ನಗೊಂಡಿತು. ಪ್ರಾರಂಭದ ಚುಟುಕಾದ ಕಾರ್ಯಕ್ರಮದಲ್ಲಿ ನಿವೃತ್ತ ಉಪತಹಸೀಲ್ದಾರರಾದ ಶ್ರೀ ವಸಂತ ಕೆ. ಅವರನ್ನು ಅವರ ಯಕ್ಷಗಾನದ ಸಾಧನೆಗಾಗಿ ಸನ್ಮಾನಿಸಲಾಯ್ತು. ಶ್ರೀಮತಿ ಸಾವಿತ್ರಿ ಮನೋಹರ್ ಸನ್ಮಾನಿತರನ್ನು ಪರಿಚಯಿಸಿ ಸನ್ಮಾನ ಪತ್ರ ವಾಚಿಸಿದರು. ಅತಿಥಿಗಳಾಗಿದ್ದ ಶ್ರೀ ಮಹಾವೀರ ಪಾಂಡಿ ಹಾಗೂ ಜೈನ ಅರ್ಚಕ ಸಂಘದ ಅಧ್ಯಕ್ಷರಾದ ಶ್ರೀ ಬಾಹುಬಲಿ ಇಂದ್ರರು ಕಾರ್ಯಕ್ರಮಕ್ಕೆ ಶುಭಕೋರಿದರು.

# ಶ್ರೀ ಕ್ಷೇತ್ರ ಪಾವಂಜೆಯಲ್ಲಿ ಕಾರ್ತಿಕ ಮಾಸ ಪೂರ್ತಿ ನಡೆದ ಕಾರ್ತಿಕ ದಿಪೋತ್ಸವ

ಕಳೆದ ಆರು ವರ್ಷಗಳಲ್ಲಿ ನಡೆದಂತೆ ಈ ವರ್ಷವೂ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿಯ ಸನ್ನಿಧಿಯಲ್ಲಿ ಕಾರ್ತಿಕ ಮಾಸ ಪೂರ್ತಿ ದೀಪೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು. ಶ್ರೀದೇವರ ನಿತ್ಯರಂಗ ಪೂಜೆಯ ಸಂದರ್ಭದಲ್ಲಿ ದೇವಳದ ಪೇಟೆಯಲ್ಲಿ ಸಾವಿರ ದೀಪಗಳನ್ನು ಉರಿಸಿ ಅಷ್ಟಾವಧಾನ ಸೇವೆಯ ಮೂಲಕ 3 ಸುತ್ತು ಬಲಿಯನ್ನು ನಡೆಸಲಾಗುವುದು. ಕೊನೆಯಲ್ಲಿ ರಾಷ್ಟ್ರಾಶೀರ್ವಾದದೊಂದಿಗೆ ಹಚ್ಚಡ ಸೇವೆಯನ್ನು ನಡೆಸಲಾಗುವುದು. ಬಲಿಯ ನಂತರ ಮಹಾಮಂಗಳಾರತಿಯ ಸಮಯದಲ್ಲಿ ವಿವಿಧ ರೀತಿಯ ಆರತಿಗಳನ್ನು (ನೆಲ್ಲಿಕಾಯಿ, ಅಡಿಕೆಯ ಸಿಪ್ಪೆ) ಬೆಳಗಿ ಕೊನೆಯಲ್ಲಿ ನಿಗದಿತ ವೇದ ಮಂತ್ರ ಪುರಸ್ಸರವಾಗಿ ''ಶಕುನಾರತಿ''ಯನ್ನು ಬೆಳಗ ಲಾಗುತ್ತದೆ. (ಸೇವಾದಾರರ ನಿಗದಿತ ಸಂಕಲ್ಪ ನೆರವೇರುವ ಬಗ್ಗೆ ಸೂಚನೆ ಸಿಗುವಂತಹ ಪ್ರಕ್ರಿಯೆ). ಒಟ್ಟು ಕಾರ್ಯಕ್ರಮಗಳು ಒಂದು ಮಾಸಪೂರ್ತಿ ನಡೆದು ಸೇವಾದಾರರನ್ನು ಹಾಗೂ ನೆರದ ಭಕ್ತರನ್ನು ಮಂತ್ರಮುಗ್ಧರ ನ್ನಾಗಿಸುತ್ತದೆ. ಆ ಸಂದರ್ಭದಲ್ಲಿ ಹಾಜರಿರುತ್ತಿದ್ದ ಸ್ಥಳೀಯ ಭಕ್ತಾದಿಗಳು ಬಹಳ ಮುತುವರ್ಜಿ ವಹಿಸಿ ದೀಪಗಳನ್ನು ಹಚ್ಚುವುದಕ್ಕೆ ಸಹಕರಿಸಿ ದರು. ಹಲವರು ಭಕ್ತಾದಿಗಳು ಸೇವಾದಾರ ರಾಗಿ ಸಹಕರಿಸಿ ಧನ್ಯಾತಾ ಭಾವವನ್ನು ಹೊಂದಿದರು. ಶ್ರೀ ಸ್ವಾಮಿಯು ಈ ಸಂದರ್ಭ ದಲ್ಲಿ ಸಹಕರಿಸಿದ ಸರ್ವರಿಗೂ ಸನ್ಮಂಗಳವನ್ನು ಉಂಟುಮಾಡಲಿ ಎಂದು ಪ್ರಾರ್ಥಿಸೋಣ.

-ಷಣ್ಮುಖಪ್ರಿಯ, ಪಾವಂಜೆ

# ವೈವಾಹಿಕ ಜೀವನದ ಬೆಳ್ಳಿಹಬ್ಬದ ಆಚರಣೆ

ಶ್ರೀ ಸುರೇಶ್ ರಾವ್, ನಂದಾವರ ಮತ್ತು ಶ್ರೀಮತಿ ಭಾಗ್ಯಲಕ್ಷ್ಮೀ ಹಾಗೂ ಶ್ರೀ ದಿನಕರ ರಾವ್, ನಂದಾವರ ಮತ್ತು ಶ್ರೀಮತಿ ಪೂರ್ಣಿಮಾ ಇವರು ತಮ್ಮ ವೈವಾಹಿಕ ಜೀವನದ ಬೆಳ್ಳಿಹಬ್ಬವನ್ನು ತಾ.20-11-2011 ರಂದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಗಣಪತಿ ಹವನ, ಶ್ರೀ ಸತ್ಯನಾರಾಯಣ ಪೂಜೆ ಮುಂತಾದ ಸೇವೆಗಳನ್ನು ನಡೆಸಿ ಬಂಧು-ಬಾಂಧವರನ್ನು ಆಮಂತ್ರಿಸಿ ಆಚರಿಸಿದರು.

# ತೋನ್ಸೆ ಪೈ ಕುಟುಂಬಸ್ಥರ ಮನೆಯಲ್ಲಿ ಶ್ರೀ ಮ.ನಾ.ಹೆಬ್ಬಾರರ ಹರಿಕಥೆ

ಉಡುಪಿ-ಕಲ್ಯಾಣಪುರ ತೋನ್ಸೆ ಪ್ರತಿಷ್ಠಿತ ಪೈ ಕುಟುಂಬಸ್ಥರು ತಮ್ಮ ಮನೆಯಲ್ಲಿ ಪ್ರತೀ ತಿಂಗಳು ಶ್ರೀ ಸತ್ಯನಾರಾಯಣ ಪೂಜೆಯನ್ನು ಜರುಗಿಸುತ್ತಿದ್ದು ಇದೇ ಕಳೆದ ತಾ.25-12-2011ರಂದು ಪೂಜೆಯು ಜರಗಿತು. ಮಧ್ಯಾಹ್ನ ಭೋಜನಾನಂತರ 3 ಗಂಟೆಗೆ ನಿವೃತ್ತ ಉಪನ್ಯಾಸಕ ಶ್ರೀ ಹರಿದಾಸ ಮ.ನಾ.ಹೆಬ್ಬಾರರಿಂದ ಭಕ್ತ ಪುರಂದರದಾಸ ಎಂಬ ಪುಣ್ಯ ಕಥಾಭಾಗದ ಹರಿಕಥಾ ಕಾರ್ಯಕ್ರಮವು ಜರಗಿತು. ಕೊನೆಯಲ್ಲಿ ಪೈ ಕುಟುಂಬದವರ ಪ್ರತಿನಿಧಿಯಾಗಿ ಶ್ರೀ ದೇವದಾಸ ಪೈಯವರು ಹರಿದಾಸರನ್ನು ಶಾಲು ಹೊದಿಸಿ ಹೂ-ಹಣ್ಣು ತಟ್ಟೆ, ಸಂಭಾವನೆಗಳನ್ನಿತ್ತು ಗೌರವಿಸಿದರು. ಶ್ರೀ ಹರಿಕೃಷ್ಣ ರಾವ್ ಇವರು ಅತಿಥಿಗಳಾಗಿ ಭಾಗವಹಿಸಿದ್ದರು.

**ಚುಟುಕ**

**ಬದುಕು-ಕೆಡುಕು**

ಮಾಡಬೇಡಯ್ಯ ಅನ್ಯರಿಗೆ ಕೆಡುಕು
ಬಹಳ ಅಮೂಲ್ಯ ಈ ಮಾನವ ಬದುಕು
ಏಕೆ ಅನವಶ್ಯ ಮಾತುಗಳಿಂದ ಬಿರುಕು
ಇದರಿಂದ ನಿನ್ನ ಸಂಸಾರಕ್ಕೇ ಕೆಡುಕು.

★★★★

**ನಗುತ ಸಾಗಿದರೆ....**

ಮನದಲ್ಲಿ ಏಕೆ ನೂರು ಬೇಸರ
ಒಂದಾಗಿ ಬಾಳಿದರೆ ಸುಖ ಸಂಸಾರ !
ನಗುತ ಸಾಗಿದರೆ ಇದೇ ಮಹಾಸಾಗರ
ಸದಾ ಹರಸಲಿ ನಿಮ್ಮನು ಹರಿಹರ !

-ವೈ. ಎ. ರಾವ್

**Poetry**

MY CHILDHOOD

Childhood are the days
This makes everyone feel gay.

These are the days in which I fell down from my cot
and I cried a lot.

These are the days I played with water and mud
When I remember it I feel oh my God !

Buut these are the days,
Which fills my mouth with honey
Even when I do not have money

-Pragathi Bhandi, Perdoor
10th Std., MJC, Manipal




# RAJESH POWER PRESS

PRINTERS & PUBLISHERS
DARBE, PUTTUR, DA. KA. -574 202.
KARNATAKA STATE, SOUTH INDIA.
Ph :(08251) 231696, 231697 & 322386
E-mail :msraghunathrao@hotmail.com

QUALITY FIRST AND ALWAYS


# ಕನಕ ಕೇದಿಗೆ ಲಯನ್ಸ್ ಪ್ರಾಂತೀಯ ಸಮ್ಮೇಳನ




ಲಯನ್ಸ್ ಕ್ಲಬ್ ಇಂಟರ್‌ನ್ಯಾಷನಲ್ ಜಿಲ್ಲೆ 324-ಡಿ5, ಪ್ರಾಂತೀಯ 4 ಇದರ ಪ್ರಾಂತೀಯ ಸಮ್ಮೇಳನವು ''ಕನಕ-ಕೇದಗೆ'' ಪ್ರಶಸ್ತಿ ಪ್ರದಾನ ದೊಂದಿಗೆ ತಾ.03-12-2011ರಂದು ಸಂಜೆ 5-30ರಿಂದ ಮಂಗಳೂರಿನ ಲೊಯಲಾ ಹಾಲ್‌ನಲ್ಲಿ ಅಶೋಕ ನಗರ ಲಯನ್ಸ್ ಮತ್ತು ಲಯನೆಸ್ ಕ್ಲಬ್ ಮಂಗಳೂರು ಇವರ ಆತಿಥ್ಯ ದಲ್ಲಿ ನೆರವೇರಿತು. ಲಿಯೋ ಪ್ರೀತಿಕಾ ಹರ್ಷಕುಮಾರ್ ಮತ್ತು ಸ್ವಾತಿ ಪ್ರಮೋದ್ ಪ್ರಾರ್ಥನೆ ಗೈದರು. ಪ್ರಾಂತೀಯ ಪ್ರಥಮ ಮಹಿಳೆ ಕನಕವಲ್ಲಿ ಹರ್ಷಕುಮಾರ್ ದೀಪ ಬೆಳಗುವುದರೊಂದಿಗೆ ಸಮ್ಮೇಳನ ಉದ್ಘಾಟಿಸಿ ದರು. ಪ್ರಾಂತೀಯ ಅಧ್ಯಕ್ಷರಾದ ಎಂ.ಜೆ.ಎಫ್. ಲಯನ್ ಹರ್ಷಕುಮಾರ್ ಕೇದಗೆ ಅಧ್ಯಕ್ಷತೆ ವಹಿಸಿದರು. ಡಾ। ವರದರಾಜ್ ಚಂದ್ರಗಿರಿ, ಪ್ರಾಂಶುಪಾಲರು, ಸರಕಾರಿ ಕಾಲೇಜು-ಬೆಟ್ಟಂಪಾಡಿ ಇವರು ಮುಖ್ಯ ಅತಿಥಿಯಾಗಿ ಸಬಲೀಕರಣದ ಪಂಚ ಸೂತ್ರಗಳ ಬಗ್ಗೆ ಉತ್ಕೃಷ್ಟ ಮಾಹಿತಿ ನೀಡಿದರು.

ಮೂಡಬಿದ್ರೆ ಆಳ್ವಾಸ್‌ನ ''ಧಿಂಕಿಟ'' ತಂಡ ಕಲಾವಿದರ ಕಥಕ್-ಯಕ್ಷಗಾನ ಸಾಂಸ್ಕೃತಿಕ ರಂಜನೆಯೊಂದಿಗೆ ಕಾರ್ಯಕ್ರಮ ಆರಂಭಿಸ ಲ್ಪಟ್ಟಿತು. ಸುಮಾರು 1 ಲಕ್ಷ ರೂಪಾಯಿ ಮೌಲ್ಯದ ವಿವಿಧ ಸೇವಾ ಕಾರ್ಯಗಳಿಗೆ ಧನ ಸಹಾಯ ನೀಡಲಾಯಿತು. ಆಟೋಮೊಬೈಲ್ ಕ್ಷೇತ್ರದಲ್ಲಿ ಸಾಧನೆ ಮಾಡಿದ ಶ್ರೀ ಶ್ರೀಧರ್ ಮತ್ತು ಶ್ರೀ ವಸಂತ ಸಾಲಿಯಾನ್ ಇವರಿಗೆ ''ಕನಕ ಕೇದಿಗೆ ಪ್ರಶಸ್ತಿ'' ನೀಡಿ ಗೌರವಿಸ ಲಾಯಿತು. ಲ। ಕಿಶೋರ್ ರಾವ್ ದಂಪತಿಗಳು, ಜಿಲ್ಲಾ ಗವರ್ನರ್ ಮುಂತಾದ ಗಣ್ಯರು ಉಪಸ್ಥಿತರಿದ್ದರು. ಲ। ಸದಾಶಿವ ಹೆಗ್ಗಡೆ ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾಗಿ, ಲ। ಸುರೇಶ್ ಶೆಟ್ಟಿ ಕಾರ್ಯದರ್ಶಿಯಾಗಿ, ಲಯನ್ ರಾಮಚಂದ್ರ ಶೆಟ್ಟಿ ಕೋಶಾಧಿ ಕಾರಿಯಾಗಿ ಕಾರ್ಯನಿರ್ವಹಿಸಿದರು. ಕ್ಲಬ್ ಅಧ್ಯಕ್ಷ ಪಿ.ಸಿ.ಸುಬ್ರಹ್ಮಣ್ಯ, ಲಯನೆಸ್ ಅಧ್ಯಕ್ಷೆ ಶೋಭಾ ಸುಬ್ರಹ್ಮಣ್ಯ ಮುಂತಾದವರು ಸಹಕರಿಸಿದರು. ಲಯನ್ ಕದ್ರಿ ನವನೀತ ಶೆಟ್ಟಿ ಮತ್ತು ಉಷಾ ನವನೀತ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ಕಾಮಿಡಿ ಕಿಲಾಡಿ ಖ್ಯಾತಿಯ ರಮೇಶ್ ಬಾಬು ತಂಡದವರಿಂದ ಮನೋ ರಂಜನಾ ಕಾರ್ಯಕ್ರಮ ನೆರವೇರಿತು.

# ಷಷ್ಠಬ್ಧಿ ಶಾಂತಿ ಕಾರ್ಯಕ್ರಮ

ಕುಂಜಾರುಗಿರಿಯಲ್ಲಿ ವಾಸ್ತವ್ಯದಲ್ಲಿರುವ ಎಲ್ಲೂರು ಶ್ರೀ ಅಚ್ಯುತರಾವ್ ಹಾಗೂ ಶ್ರೀಮತಿ ಮೀನಾಕ್ಷಿ ಅಚ್ಯುತ ರಾವ್ ದಂಪತಿಗಳ ಷಷ್ಠ್ಯಬ್ದಿ ಶಾಂತಿ ಕಾರ್ಯಕ್ರಮವನ್ನು ಕುಂಜಾರುಗಿರಿಯಲ್ಲಿರುವ ಅವರ ಸ್ವಗೃಹ 'ಕಸ್ತೂರಿ ನಿಲಯ'ದಲ್ಲಿ ತಾ.07-12-2011ರಂದು ತಮ್ಮ ಮಕ್ಕಳು ಹಾಗೂ ಬಂಧು-ಬಾಂಧವರೊಡಗೂಡಿ ಆಚರಿಸಿದರು.

# ಸಹಸ್ರ ಚಂದ್ರದರ್ಶನ ಶಾಂತಿ

ಶ್ರೀ ಅಲೆವೂರು ಶ್ರೀನಿವಾಸ ರಾವ್ (ದಿ। ಅಲೆವೂರು ಸುಬ್ಬರಾವ್‌ರವರ ಹಿರಿಯ ಪುತ್ರ) ಇವರ ಸಹಸ್ರ ಚಂದ್ರದರ್ಶನ ಶಾಂತಿ ಮಹೋತ್ಸವವು ತಾ.27-12-2011ರಂದು ಉಡುಪಿ ರಥಬೀದಿಯಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ನೆರವೇರಿತು.

# ಪುಣ್ಯಸ್ಮರಣೆ



ಜನನ : 04-02-1946 ನಿಧನ : 20-12-2007

**ಶ್ರೀಮತಿ ಕುಸುಮ ಗೋವಿಂದ ರಾವ್, ಕರಾಡ**

ನೀವು ನಮ್ಮನ್ನಗಲಿ 4 ವರ್ಷ ಕಳೆದರೂ ನಿಮ್ಮ ನೆನಪು ಹಸಿರಾಗಿದ್ದು ನಿಮ್ಮ ಆದರ್ಶ, ಸದ್ಗುಣ ಸಂಪನ್ನತೆಯೇ ನಮಗೆ ದಾರಿದೀಪ. ನಿಮ್ಮನ್ನು ನಿರಂತರವೂ ಸ್ಮರಿಸುತ್ತಿರುವ,

**ವೈ. ಗೋವಿಂದ ರಾವ್ (ಪತಿ); ಮಕ್ಕಳು-ವೈ.ನಾಗರಾಜ ರಾವ್ ಮತ್ತು ಶ್ರೀಮತಿ ಸುಮಂಗಲ ಎನ್.ರಾವ್; ವೈ.ಕೃಷ್ಣ ರಾಜ ರಾವ್ ಮತ್ತು ಶ್ರೀಮತಿ ವೈ.ಗಾಯತ್ರಿ ಕೈ.ರಾವ್; ಶ್ರೀಮತಿ ಹೇಮಲತಾ ರಾಜೇಂದ್ರ ಕುಮಾರ್; ರಾಜೇಂದ್ರ ಗೋಪಾಲ ಕೃಷ್ಣ ರಾವ್ ಮತ್ತು ಋತುಜ; ಋಷಿಕೇಶ್; ರಕ್ಷಾ; ರಕ್ಷಿತಾ; ನಮ್ರತಾ; ಅನ್ವಿತ (ಮೊಮ್ಮಕ್ಕಳು)**

## ಮಾಂಗಲ್ಯಂ ತಂತುನಾನೇನ ....

ಶ್ರೀಮತಿ ಗೀತಾ ಮತ್ತು ದಿ| ಪಿ.ಬಿ.ಸುಬ್ರಹ್ಮಣ್ಯ ಸ್ವಾಮಿ ಇವರ ಪುತ್ರಿ **ಸ್ವಪ್ನರಾವ್** ಹಾಗೂ ಶ್ರೀಮತಿ ಉಷಾ ಬ್ಯಾ ಮತ್ತು ಶ್ರೀ ನಾಗೇಶ ರಾವ್ ಸಸಾನೆ ಇವರ ಪುತ್ರ **ಉಮೇಶ್ ರಾವ್** ಇವರ ವಿವಾಹವು ತಾ.27-11-2011ರಂದು ಬೆಂಗಳೂರಿನಲ್ಲಿರುವ ರಾಗೀ ಗುಡ್ಡದ ಶ್ರೀ ಪ್ರಸನ್ನ ಆಂಜನೇಯ ಸ್ವಾಮಿ ಕಲ್ಯಾಣ ಮಂಟಪ, 9ನೇ ಬ್ಲಾಕ್, ಜಯನಗರ, ಬೆಂಗಳೂರು ಇಲ್ಲಿ ನೆರವೇರಿತು.

★★★★

ಎಲ್ಲೂರು ಶ್ರೀಮತಿ ನಳಿನಿ ಮತ್ತು ಶ್ರೀ ವಾಸುದೇವ ರಾಯರ ಪುತ್ರ **ಲೋಹಿತ್** ಹಾಗೂ ಬೆಳ್ಮಣ್ಣು ಶ್ರೀಮತಿ ಪ್ರಭಾ ಮತ್ತು ಶ್ರೀ ಮುರಳೀಧರ ಶರ್ಮರವರ ಪುತ್ರಿ **ದಿವ್ಯ** ಇವರ ವಿವಾಹವು ತಾ.01-01-2012ರಂದು ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ಮಂಟಪದಲ್ಲಿ ನೆರವೇರಿತು

★★★★

ಮಿತ್ತೂರು ಶ್ರೀ ಸುರೇಶ್ ರಾವ್ ಮತ್ತು ಶ್ರೀಮತಿ ಮೀನಾಕ್ಷಿ ಇವರ ಪುತ್ರಿ **ನಿಶ್ಮಿತಾ** ಹಾಗೂ ಕೊಕ್ರಾಡಿ ಶ್ರೀ ವಸಂತ ರಾವ್ ಮತ್ತು ಶ್ರೀಮತಿ ಸಾವಿತ್ರಿ ಇವರ ಪುತ್ರ **ಸಂದೀಪ್** ಇವರ ವಿವಾಹವು ತಾ.01-01-2012ರಂದು ಕುಳಾಯಿ ಹೊಸಬೆಟ್ಟು ನವಗಿರಿ ಕಲ್ಯಾಣ ಮಂಟಪದಲ್ಲಿ ನೆರವೇರಿತು.

## ಶುಭ ಜನನ

ಹುಬ್ಬಳ್ಳಿಯಲ್ಲಿ ವಾಸ್ತವ್ಯವಿರುವ ಬ್ರಹ್ಮಾವರದ ಶ್ರೀ ಕಿರಣ್‌ಕುಮಾರ್ ಎಂ. ಹಾಗೂ ಶ್ರೀಮತಿ ಕೀರ್ತಿ ಕೆ. ರಾವ್ ದಂಪತಿಗಳಿಗೆ ತಾ.12-1-2012 ಗುರುವಾರದಂದು ಗಂಡು ಮಗುವಿನ ಜನನ.

## ವಿಳಾಸ ಬದಲಾವಣೆ

**ಈ ಮೊದಲು ಉಡುಪಿ ಬೈಲೂರು ಶಾಂತಿನಗರದಲ್ಲಿ ವಾಸ್ತವ್ಯವಿದ್ದ ಶ್ರೀಮತಿ ಪಿ.ಶಕುಂತಲ ಕೃಷ್ಣರಾವ್ ಇವರು** ಪ್ರಸ್ತುತ ಆಲೆವೂರು ನೆಹರೂ ಹೈಸ್ಕೂಲ್ ಬಳಿ ನೆಹರು ನಗರದ 'ಶ್ರೀನಿವಾಸ್' ಎಂಬ ಸ್ವಂತ ಮನೆಯಲ್ಲಿ ವಾಸ್ತವ್ಯ ಹೂಡಿರುತ್ತಾರೆ.

## ನಿಧನ

### ಶ್ರೀಮತಿ ಯಶೋದಾ ಎಸ್.ರಾವ್

ಕರಂಬಳ್ಳಿ ಕೃಷ್ಣರಾಯರ ಮಗಳು ಹಾಗೂ ಉಂಡಾರು ಸದಾಶಿವ ರಾಯರ ಧರ್ಮಪತ್ನಿ ಶ್ರೀಮತಿ ಯಶೋದಾ ಎಸ್.ರಾವ್ ಇವರು ತಾ.12-12-2011ರಂದು ದೈವಾಧೀನರಾದರು. ಇವರು ಓರ್ವ ಪುತ್ರಿ, ಮೂವರು ಪುತ್ರರು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿರುತ್ತಾರೆ.

## ತಿದ್ದುಪಡಿ

ತಂತ್ರಾಡಿಯ ಶ್ರೀ ಟಿ.ವಿಷ್ಣುಮೂರ್ತಿ ಶ್ಯಾನುಭಾಗ್ (48) ಇವರು ತಾ.15-10-11 ರಂದು ತಂತ್ರಾಡಿಯಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ನಿಧನರಾಗಿದ್ದು ನವಂಬರ್ 2011ರ ಶ್ರೀಶಾರದಾ ಪತ್ರಿಕೆಯಲ್ಲಿ ಇವರ ಹೆಸರು ಶ್ರೀ ಟಿ.ಕೃಷ್ಣಮೂರ್ತಿ ಶ್ಯಾನುಭಾಗ್ ಎಂದು ತಪ್ಪಾಗಿ ಮುದ್ರಿಸಲ್ಪಟ್ಟಿದೆ. ಇವರ ಹೆಸರನ್ನು ಶ್ರೀ ಟಿ.ವಿಷ್ಣುಮೂರ್ತಿ ಶ್ಯಾನುಭಾಗ್ ಎಂದು ಓದಿಕೊಳ್ಳಬೇಕಾಗಿ ವಿನಂತಿ.

## ಮಕರ ಮಾಸದ ವಿಶೇಷ ದಿನಗಳು

| | |
|---|---|
| 14-01-2012 | ಮಕರ ಸಂಕ್ರಮಣ |
| 19-01-2012 | ಸರ್ವೇಕಾದಶೀ |
| 20-01-2012 | ಪ್ರದೋಷಃ |
| 23-01-2012 | ಅಮಾವಾಸ್ಯಾ |
| 24-01-2012 | ಶ್ರಾವಣ ನಕ್ಷತ್ರಾರಂಭ |
| 03-02-2012 | ಸರ್ವೇಕಾದಶೀ |
| 05-02-2012 | ಪ್ರದೋಷಃ |
| 06-02-2012 | ಧನಿಷ್ಠಾ ನಕ್ಷತ್ರಾರಂಭ |
| 07-02-2012 | ಪೂರ್ಣಿಮಾ |
| 10-02-2012 | ಸಂಕಷ್ಟಹರ ಚತುರ್ಥಿ (ಚಂದ್ರೋದಯ ರಾತ್ರಿ ಘಂಟೆ 9-03ಕ್ಕೆ) |
| 13-02-2012 | ಕುಂಭ ಸಂಕ್ರಮಣ |

ಅಭಿನಂದನೆ

# ಪ್ರಥಮ ರ್‍ಯಾಂಕ್ ವಿಜೇತೆ-ಪ್ರೀತಿಕಾ ಪಿಲಿಂಜ



ಮಂಗಳೂರು ವಿಶ್ವವಿದ್ಯಾಲಯ 2010-11ರಲ್ಲಿ ನಡೆಸಿದ ಕಾನೂನು ಪದವಿ ಪರೀಕ್ಷೆಯಲ್ಲಿ (ಎಲ್‌ಎಲ್‌ಬಿ) ಮಂಗಳೂರಿನ ಎಸ್‌ಡಿಎಮ್ ಲಾ ಕಾಲೇಜಿನ ವಿದ್ಯಾರ್ಥಿನಿ ಪ್ರೀತಿಕಾ ಪಿಲಿಂಜ ಪ್ರಥಮ ರ್‍ಯಾಂಕ್ ಗಳಿಸಿದ್ದಾರೆ. ಇವರು 2008-09ರಲ್ಲಿ ನಡೆಸಿದ B.A. at Law ಪರೀಕ್ಷೆಯಲ್ಲೂ ಪ್ರಥಮ ರ್‍ಯಾಂಕ್ ಗಳಿಸಿದ್ದರು. ಇವರು LLM ಪ್ರವೇಶ ಪರೀಕ್ಷೆಯಲ್ಲೂ (CLAT) ರಾಷ್ಟ್ರಮಟ್ಟದ 7ನೇ ರ್‍ಯಾಂಕ್ ಹಾಗೂ ರಾಜ್ಯದ ಪ್ರಥಮ ರ್‍ಯಾಂಕ್ ಗಳಿಸಿ ತನ್ನ ಕಾನೂನು ಸ್ನಾತಕೋತ್ತರ ವಿದ್ಯಾಭ್ಯಾಸವನ್ನು, ನಮ್ಮ ದೇಶದ ಪ್ರತಿಷ್ಠಿತ "National Law College" ಬೆಂಗಳೂರಿನಲ್ಲಿ ಮುಂದುವರಿಸಿದ್ದಾರೆ. ಇಲ್ಲಿಯೂ "Research Scholar" ಆಗಿ ಆಯ್ಕೆಗೊಂಡಿದ್ದಾರೆ. ಇವರು ಪುತ್ತೂರಿನಲ್ಲಿ ವಾಸ್ತವ್ಯದಲ್ಲಿರುವ ಕೆನರಾ ಬ್ಯಾಂಕ್ ಉದ್ಯೋಗಿ ಶ್ರೀಯುತ ತುಳಸಿದಾಸ್ ಪಿಲಿಂಜ ಹಾಗೂ ಶ್ರೀಮತಿ ಸಾವಿತ್ರಿ ಪಿಲಿಂಜರವರ ಪ್ರಥಮ ಪುತ್ರಿ. ನಮ್ಮ ರಾಜ್ಯದ, ನಮ್ಮ ಸಮಾಜದ ಹೆಮ್ಮೆಯ ಪ್ರತಿಭೆಗೆ ಶ್ರೀಶಾರದಾ ಪತ್ರಿಕೆಯ ಅಭಿನಂದನೆಗಳು.

## ಕುಮಾರಿ ಪ್ರಗತಿ ಭಂಡಿ ಪೆರ್ಡೂರು : ರಾಜ್ಯಮಟ್ಟದ ಪ್ರತಿಭಾ ಕಾರಂಜಿಗೆ ಆಯ್ಕೆ



ತಾ.21-12-2011ರಂದು ಉಡುಪಿಯ ಟಿ.ಎ.ಪೈ ಇಂಗ್ಲಿಷ್ ಮೀಡಿಯಂ ಹೈಸ್ಕೂಲ್ ಕುಂಜಿಬೆಟ್ಟು ಇಲ್ಲಿ ಏರ್ಪಡಿಸಿದ ಜಿಲ್ಲಾ ಮಟ್ಟದ ಪ್ರೌಢಶಾಲಾ ವಿಭಾಗದ ವೈಯಕ್ತಿಕ ಇಂಗ್ಲೀಷ್ ಭಾಷಣ ಸ್ಪರ್ಧೆಯಲ್ಲಿ ಪಾಲ್ಗೊಂಡು ಪ್ರಥಮ ಸ್ಥಾನವನ್ನು ಗಳಿಸಿ ಐತಿಹಾಸಿಕ ಚಿತ್ರದುರ್ಗ ಜಿಲ್ಲೆಯಲ್ಲಿ ನಡೆಯಲಿರುವ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಆಯ್ಕೆಯಾಗಿರುತ್ತಾಳೆ.

ಈಕೆ ಪ್ರತಿಭಾಕಾರಂಜಿಯ ಕ್ಲಸ್ಟರ್ ಹಂತ ಹಾಗೂ ವಲಯ ಮಟ್ಟದ ಹಿಂದಿ ಭಾಷಣ ಹಾಗೂ ಕನ್ನಡ ಆಶುಭಾಷಣ ಸ್ಪರ್ಧೆಯಲ್ಲೂ ಪ್ರಥಮ ಸ್ಥಾನ ಗಳಿಸಿರುತ್ತಾಳೆ.

ಈಕೆ ಇತ್ತೀಚೆಗೆ ಎಂ.ಇ.ಟಿ. ಇಂಗ್ಲೀಷ್ ಮೀಡಿಯಂ ಶಾಲೆ, ಉದ್ಯಾವರ ಇವರು ಏರ್ಪಡಿಸಿದ ಇಂಗ್ಲೀಷ್ ಭಾಷಣ ಸ್ಪರ್ಧೆಯಲ್ಲಿ ಪ್ರಥಮ ಹಾಗೂ ಟಿ.ಎಂ.ಎ.ಪೈ ಆಂಗ್ಲ ಮಾಧ್ಯಮ ಶಾಲೆ, ಕಲ್ಯಾಣಪುರ ಇಲ್ಲಿ ಏರ್ಪಡಿಸಿದ ಕನ್ನಡ ಆಶುಭಾಷಣ ಸ್ಪರ್ಧೆಯಲ್ಲಿ ತನಗೆ ಬಂದ ವಿಷಯ 'ಹಬ್ಬಗಳು' ಇದರಲ್ಲಿಯೂ ಪ್ರಥಮ ಸ್ಥಾನ ಗಳಿಸಿರುತ್ತಾಳೆ.

ಈಕೆ ಪ್ರಸ್ತುತ ಮಣಿಪಾಲ ಪದವಿಪೂರ್ವ ಕಾಲೇಜಿನಲ್ಲಿ ಹತ್ತನೆ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಳೆ. ಈಕೆ ಪೆರ್ಡೂರು ಗೋಪಾಲ ಕೃಷ್ಣ ಭಂಡಿಯವರ ಪೌತ್ರಿ ಹಾಗೂ ರವೀಂದ್ರ ಭಂಡಿ, ಮೆನೇಜರ್ ಸಿಂಡಿಕೇಟ್ ಬ್ಯಾಂಕ್ ಹರಿಹರಪುರ ಶಾಖೆ ಮತ್ತು ಶ್ರೀಮತಿ ವಾಣಿ ಭಂಡಿಯವರ ಪುತ್ರಿ ಆಗಿರುತ್ತಾಳೆ. ಇವಳಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

## ಪಂಚಕರ್ಮ ವಿಭಾಗದಲ್ಲಿ ಪ್ರಥಮ ರ್‍ಯಾಂಕ್ ವಿಜೇತೆ

## ಡಾ| ಪ್ರಸನ್ನಾ ಅನಿಲ್‌ಕುಮಾರ್, ಬೈಕಾಡಿ



ಬೈಕಾಡಿ ಡಾ| ಸೂರ್ಯನಾರಾಯಣ ರಾವ್ ಮತ್ತು ಶ್ರೀಮತಿ ಶೋಭಾರವರ ಸೊಸೆಯೂ, ಡಾ| ಬೈಕಾಡಿ ಅನಿಲ್‌ಕುಮಾರ್ ರವರ ಪತ್ನಿಯೂ ಆದ ಡಾ| ಶ್ರೀಮತಿ ಪ್ರಸನ್ನಾ ಅನಿಲ್ ಕುಮಾರ್‌ರವರು ಮಣಿಪಾಲ ಮಾಹೆ ಡೀಮ್ಡ್ ಯುನಿವರ್ಸಿಟಿಯ ಪೋಸ್ಟ್ ಗ್ರಾಜುಯೇಟ್ ಸರ್ಟಿಫಿಕೇಟ್ ಕೋರ್ಸ್‌ಗಾಗಿ ಪಂಚಕರ್ಮ ವಿಭಾಗದಲ್ಲಿ ವಿಶೇಷ ಅಧ್ಯಯನ ನಡೆಸಿ 2011 ಫೆಬ್ರವರಿಯಲ್ಲಿ ನಡೆದ ಪರೀಕ್ಷೆಯಲ್ಲಿ ವಿಶ್ವವಿದ್ಯಾಲಯಕ್ಕೆ ಪ್ರಥಮ ರ್‍ಯಾಂಕ್‌ಗಳಿಸಿ ತೇರ್ಗಡೆ ಹೊಂದಿದ್ದಾರೆ. ಇವರ ಸಾಧನೆಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

## ಪದೋನ್ನತಿ

ಕಾರ್ಕಳ ತಾಲೂಕು ವಿಶ್ವಾಸನಗರ ದಲ್ಲಿರುವ ಮೆ| ಕೆಲ್‌ಟೆಕ್ ಎನರ್ಜೀಸ್ ಲಿಮಿಟೆಡ್‌ನಲ್ಲಿ ಉದ್ಯೋಗಿಯಾಗಿರುವ ಪಣಂಬೂರು ಶಶಿಧರ ಶರ್ಮರು ಸೀನಿಯರ್ ಜನರಲ್ ಮೆನೇಜರ್ ಆಗಿ ಭಡ್ತಿ ಹೊಂದಿರುತ್ತಾರೆ. ಪ್ರಸ್ತುತ ಮನೆ ನಂ.4-5ಬಿ-295, ಪ್ರಸಾದ್ ಕಾಲೋನಿ, ಅಚ್ಯುತನಗರ, ಪರ್ಕಳ, ಉಡುಪಿ ಜಿಲ್ಲೆ ಇಲ್ಲಿ ವಾಸವಾಗಿದ್ದಾರೆ.

# ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

ಡಾ| ವೈ. ಸುದರ್ಶನ ರಾವ್

**ಪ್ರಶ್ನೆ : ಟೊನ್ಸಿಲೈಟಿಸ್ (tonsilitis) ಎಂದರೇನು? ಅದರ ಚಿಕಿತ್ಸೆ ಹೇಗೆ?**

**ಉತ್ತರ :** ಬಾಯಿಯನ್ನು ಅಗಲಿಸಿ ನೋಡಿದಾಗ ಕಾಣುವುದು ಗಂಟಲು. ಈ ಗಂಟಲು ಆರಂಭವಾಗುವುದಕ್ಕೆ ಸ್ವಲ್ಪ ಮೊದಲು ಅಂದರೆ ನಾಲಗೆಯ ಹಿಂಭಾಗದ ಹತ್ತಿರ ಗಂಟಲಿನ ಇಕ್ಕೆಲಗಳಲ್ಲಿ ಒಂದೊಂದು ನೆಲ್ಲಿಕಾಯಿ ಗಾತ್ರದ ಮಾಂಸದ ತುಣುಕುಗಳು ಇಣುಕುತ್ತಿರುವಂತೆ ಕಾಣುವ ಗ್ರಂಥಿಗಳಿವೆ. ಇವನ್ನು ಟೋನ್ಸಿಲ್ ಎಂದು ಕರೆಯುತ್ತಾರೆ.

ನಮ್ಮ ದೇಹಕ್ಕೆ ಹೆಚ್ಚಿನ ಕಾಯಿಲೆ ಬರುವುದು ಬ್ಯಾಕ್ಟೀರಿಯಾಗಳಂತಹ ಮೀಣಜೀವಿಗಳಿಂದ. ಈ ಜೀವಿಗಳು ನಮ್ಮ ದೇಹವನ್ನು ಪ್ರವೇಶಿಸದಂತೆ ತಡೆಯುವುದು ಲಿಂಫಾಟಿಕ್ (lymphatic tissue) ಎಂಬ ಅಂಗಾಂಶಗಳ ಕೆಲಸ. ಈ ಅಂಗಾಂಶಗಳು, ಮೀಣಜೀವಿಗಳು ದೇಹವನ್ನು ಪ್ರವೇಶಿಸಿದರೆ ಅವನ್ನು ನುಂಗಿ ಕೊಲ್ಲುವುದು ಮಾತ್ರವಲ್ಲದೆ ಅವುಗಳ ವಿರುದ್ಧ ಹೋರಾಡುವ ಪ್ರತಿರೋಧಕಗಳನ್ನು ಉತ್ಪಾದಿಸುವವು. ಈ ಲಿಂಫಾಟಿಕ್ ಅಂಗಾಂಶವು ಸಾಧಾರಣವಾಗಿ ದೇಹದ ಎಲ್ಲಾ ಭಾಗಗಳಲ್ಲೂ ಇರುತ್ತದೆ. ದೇಹದ ಯಾವ ಭಾಗದ ಮೂಲಕ ಬ್ಯಾಕ್ಟೀರಿಯಾಗಳು ದೇಹವನ್ನು ಪ್ರವೇಶಿಸುವ ಸಾಧ್ಯತೆ ಹೆಚ್ಚಿದೆಯೋ ಅಲ್ಲಿ ಈ ಅಂಗಾಂಶಗಳು ಹೆಚ್ಚು ಸಂಖ್ಯೆಯಲ್ಲಿರುತ್ತವೆ. ಟೋನ್ಸಿಲ್ ಈ ಲಿಂಫಾಟಿಕ್ ಅಂಗಾಂಶವೇ ಮುಖ್ಯವಾಗಿ ಇರುವಂತಹ ಒಂದು ಅಂಗ. ಬಾಯಿಯ ಮತ್ತು ಉಸಿರಿನ ಮೂಲಕ ದೇಹವನ್ನು ಪ್ರವೇಶಿಸಲು ಯತ್ನಿಸುವ ಮೀಣಜೀವಿಗಳನ್ನು ಕೊಲ್ಲುವುದು ಇದರ ಕೆಲಸ. ಬ್ಯಾಕ್ಟೀರಿಯಾಗಳ ಸಂಖ್ಯೆ ಹೆಚ್ಚಿದರೆ ಅಥವಾ ಅವುಗಳು ಬಲಶಾಲಿಗಳಾಗಿದ್ದರೆ ಶುರುವಿಗೆ ಬ್ಯಾಕ್ಟೀರಿಯಾಗಳದ್ದೇ ಕೈಮೇಲಾಗಬಹುದು. ಈ ಸಂದರ್ಭದಲ್ಲಿ ಟೋನ್ಸಿಲ್ ಊದಿಕೊಂಡು ಕೆಂಪಗಾಗುತ್ತದೆ. ಇದನ್ನು ಟೊನ್ಸಿಲೈಟಿಸ್ ಎನ್ನುವರು.

ಗಂಟಲು ನೋವು (sore throat), ನುಂಗುವಾಗ ನೋವು, ಕುತ್ತಿಗೆಯ ಇಕ್ಕೆಲಗಳಲ್ಲಿ ಕಿವಿಯ ಕೆಳಭಾಗದಲ್ಲಿ ನೋವು ಮತ್ತು ಊತ, ಜ್ವರ ಮತ್ತು ಕೆಮ್ಮು ಟೊನ್ಸಿಲೈಟಿಸ್ ಖಾಯಿಲೆಯ ಚಿಹ್ನೆಗಳು. ಬಾಯಿ ಅಗಲಿಸಿ ಟೋನ್ಸಿಲ್ಲನ್ನು ಗಮನಿಸಿ ನೋಡಿದರೆ ಅದು ಕೆಂಪಗಾಗಿ ಊದಿಕೊಂಡಿರುವುದನ್ನು ಕಾಣಬಹುದು. ಕೆಲವೊಮ್ಮೆಯಂತೂ ಗಂಟಲಿನ ಎರಡೂ ಬದಿಯಲ್ಲಿರುವ ಟೋನ್ಸಿಲ್‌ಗಳು ಊದಿಕೊಂಡು ಗಂಟಲಿನ ದಾರಿಯನ್ನೇ ಮುಚ್ಚಿಬಿಡುವಷ್ಟು ದೊಡ್ಡದಾಗುವುದುಂಟು. ಟೋನ್ಸಿಲ್‌ನ ಮೇಲೆ ರಶಿಗೆ (pus)ಯ ಬಿಂದುಗಳು ಕಾಣಿಸಿದರೆ ಟೋನ್ಸಿಲೈಟಿಸ್ ಆಗಿರುವ ಬಗ್ಗೆ ಅನುಮಾನ ಉಳಿಯುವುದಿಲ್ಲ.

ಐಸ್‌ಕ್ರೀಮ್‌ನಂತಹಾ ತಂಪು ಪದಾರ್ಥ ಸೇವನೆ, ಧೂಳು ಮತ್ತು ಕಲುಷಿತ ಗಾಳಿಯ ಸೇವನೆ, ಅಥವಾ ನೆಗಡಿ, ಗಂಟಲು ನೋವು ಇರುವ ರೋಗಿಗಳ ಉಸಿರಿನ ಸಂಪರ್ಕಕ್ಕೆ ಬಂದಿರುವುದು ಟೊನ್ಸಿಲೈಟಿಸ್ ಆರಂಭವಾಗಲು ಮಾಮೂಲಿ ಕಾರಣಗಳು. ಕೆಲವೊಮ್ಮೆ ನೆಗಡಿ ಆರಂಭವಾಗಿ ಟೋನ್ಸಿಲೈಟಿಸ್‌ಗೆ ಮುಂದುವರಿಯಬಹುದು. ಟೋನ್ಸಿಲೈಟಿಸ್ ಮಕ್ಕಳಲ್ಲಿ ಪದೇ ಪದೇ ಕಾಣಿಸಿಕೊಳ್ಳುವುದು ಮಾಮೂಲಿ. ಮಕ್ಕಳು ಬೆಳೆದಂತೆ, ಟೋನ್ಸಿಲ್ ಗಾತ್ರದಲ್ಲಿ ಕುಗ್ಗುವುದರಿಂದ ದೊಡ್ಡವರಲ್ಲಿ ಟೋನ್ಸಿಲೈಟಿಸ್ ಆಗುವುದು ಕಡಿಮೆ.

ಬ್ಯಾಕ್ಟೀರಿಯಾಗಳನ್ನು ಕೊಲ್ಲುವ ಔಷಧಿಯಾದ ಆಂಟಿಬಯಾಟಿಕ್‌ಗಳನ್ನು ಸೇವಿಸಿದರೆ ಟೋನ್ಸಿಲೈಟಿಸ್ ಶೀಘ್ರವಾಗಿ ಗುಣವಾಗುತ್ತದೆ. ಉಪ್ಪು ನೀರಿನಲ್ಲಿ ಬಿಸಿನೀರಿನಲ್ಲಿ ಬಾಯಿ ಮುಕ್ಕಳಿಸಿದರೆ ತಾತ್ಕಾಲಿಕ ಉಪಶಮನ ಸಿಗುತ್ತದೆ. ಟೊನ್ಸಿಲಿನ ನೋವು ನಿಂತ ಕೂಡಲೆ ಆಂಟಿಬಯಾಟಿಕ್ ಸೇವನೆ ನಿಲ್ಲಿಸದೇ ಕನಿಷ್ಠ ಎರಡು ವಾರ ಸೇವಿಸಿದರೆ ಟೋನ್ಸಿಲ್ ಮರುಕಳಿಸುವ ಸಾಧ್ಯತೆಯನ್ನು ಕಡಿಮೆ ಮಾಡಬಹುದು. ಪೌಷ್ಟಿಕ ಆಹಾರದ ಸೇವನೆಯು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವುದರಿಂದ ಇದೂ ಟೊನ್ಸಿಲೈಟಿಸ್ ಮರುಕಳಿಸುವುದನ್ನು ತಡೆಯುವುದರಲ್ಲಿ ಸಹಕಾರಿ.

ಒಂದು ವೇಳೆ ಟೋನ್ಸಿಲೈಟಿಸ್ ತೊಂದರೆಯು ಸರಿಯಾದ ಆಂಟಿಬಯಾಟಿಕ್ ಚಿಕಿತ್ಸೆಯ ನಂತರವೂ ಒಂದು ವರ್ಷದಲ್ಲಿ ನಾಲ್ಕಕ್ಕಿಂತ ಹೆಚ್ಚು ಸಲ ಮರುಕಳಿಸಿದರೆ, ಆಹಾರ ನುಂಗಲು ತಡೆಯುಂಟಾಗುವಷ್ಟು ದೊಡ್ಡದಾಗಿದ್ದರೆ, ಅಥವಾ ಅದರಲ್ಲಿ ಕೀವಾದರೆ, ಅಥವಾ ಟೋನ್ಸಿಲ್‌ನ ಊತ ಟೋನ್ಸಿಲೈಟಿಸ್ ಅಲ್ಲದೆ ಅದು ಕ್ಯಾನ್ಸರ್‌ನಿಂದಲೂ ಇರಬಹುದೆಂಬ ಸಂಶಯ ವೈದ್ಯರಿಗಿದ್ದರೆ ಆಗ ಟೋನ್ಸಿಲನ್ನು ಶಸ್ತ್ರಚಿಕಿತ್ಸೆಯ ಮುಖಾಂತರ ತೆಗೆಯಬೇಕಾಗುತ್ತದೆ. ಟೋನ್ಸಿಲ್‌ನ ಶಸ್ತ್ರಚಿಕಿತ್ಸೆಯನ್ನು ಕಿವಿ ಮೂಗು ಗಂಟಲು ತಜ್ಞರು ಮಾಡುತ್ತಾರೆ. ಇದು ಸಾಧಾರಣವಾಗಿ ಎಲ್ಲಾ ಆಸ್ಪತ್ರೆಗಳಲ್ಲಿ ಮಾಡಬಹುದಾದ ಸರಳ ಶಸ್ತ್ರಚಿಕಿತ್ಸೆಯಾಗಿದ್ದು ಅಪರೂಪದಲ್ಲಿ ಕೆಲವೊಮ್ಮೆ ಶಸ್ತ್ರಚಿಕಿತ್ಸೆ ಸಂದರ್ಭದಲ್ಲಿ ರಕ್ತಸ್ರಾವವಾಗಿ ತೊಂದರೆ ಕೊಡುವುದಿದೆ. ಒಂದು ಕಾಲದಲ್ಲಿ ಹೆಚ್ಚಿನ ರೋಗಿಗಳ ಶಸ್ತ್ರಚಿಕಿತ್ಸೆಯ ಅಗತ್ಯಬೀಳುತ್ತಿದ್ದ ಈ ಖಾಯಿಲೆಗೆ ಆಂಟಿಬಯಾಟಿಕ್‌ಗಳ ಬಳಕೆಯಿಂದಾಗಿ ಶಸ್ತ್ರಚಿಕಿತ್ಸೆಯ ಅಗತ್ಯ ಈಗ ಗಣನೀಯವಾಗಿ ಕಡಿಮೆಯಾಗಿದೆ.

ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 98451 36322

## ವಿಜ್ಞಾಪನೆ

ತಮಗೆಲ್ಲರಿಗೂ ತಿಳಿದಿರುವಂತೆ ಶ್ರೀಶಾರದಾ ಪತ್ರಿಕೆಯು ಪ್ರತಿ ತಿಂಗಳು 15ನೇ ತಾರೀಕಿಗೆ ಅಂಚೆಯಲ್ಲಿ ರವಾನೆಯಾಗುತ್ತಿದೆ. ಈ ಪತ್ರಿಕೆಯನ್ನು ಪ್ರತಿ ತಿಂಗಳೂ ಮುದ್ರಿಸಿ ಕ್ಲಪ್ತ ಸಮಯದಲ್ಲಿ ಕಳುಹಿಸಲು ಅನುಕೂಲವಾಗುವಂತೆ ಸಮಾಜ ಬಾಂಧವರು ತಮ್ಮ ಲೇಖನ, ವರದಿ, ಸುದ್ದಿ ಇತ್ಯಾದಿಗಳನ್ನು ಪ್ರತಿ ತಿಂಗಳು 8ನೇ ತಾರೀಕಿನ ಒಳಗೆ ನಮಗೆ ತಲುಪುವಂತೆ ಕಳುಹಿಸಬೇಕಾಗಿ ವಿನಂತಿ.

– ಸಂಪಾದಕ ಮಂಡಳಿ

॥ ಅನ್ನಪೂರ್ಣೇಶ್ವರೀ ಪ್ರಸನ್ನಾ ॥

## ಶ್ರೀ ಅನ್ನಪೂರ್ಣೇಶ್ವರೀ ದೇವಸ್ಥಾನ

**ಮುಲ್ಲಡ್ಕ, ಅಂಚೆ : ಮುಂಡ್ಕೂರು, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ-576 121.**

ಪ್ರಿಯ ಆಸ್ತಿಕ ಬಂಧುಗಳೇ,

ಸ್ವಸ್ತಿ! ಶ್ರೀ ಖರ ನಾಮ ಸಂವತ್ಸರದ ಮಾಘ ಶುದ್ಧ ನವಮಿ ದಿನಾಂಕ 01-02-2012ನೇ ಬುಧವಾರದಂದು ಶ್ರೀ ದೇವರ

### ವಾರ್ಷಿಕ ಮಹೋತ್ಸವವು

ಜರಗಲಿರುವುದು. ತಾವು ಉತ್ಸವ ಕಾರ್ಯಕ್ರಮಗಳಿಗೆ ಆಗಮಿಸಿ, ತನು-ಮನ-ಧನಗಳಿಂದ ಸಹಕರಿಸಿ, ದೇವರ ಶ್ರೀ ಮುಡಿ ಗಂಧ ಪ್ರಸಾದವನ್ನು ಸ್ವೀಕರಿಸಿ, ಶ್ರೀ ದೇವಿಯ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ವಿನಂತಿಸುವ,

**ಆಡಳಿತ ಮೊಕ್ತೇಸರರು,**
**ಆಡಳಿತ ಮಂಡಳಿಯ ಪದಾಧಿಕಾರಿಗಳು, ಸದಸ್ಯರು**
**ಅರ್ಚಕರು ಹಾಗೂ ಊರ ಸಮಸ್ತರು**

ವಿ.ಸೂ. : ಭಕ್ತರು ಅಕ್ಕಿ, ತೆಂಗಿನಕಾಯಿ, ತುಪ್ಪ, ಎಣ್ಣೆ, ಬೆಲ್ಲ ಅಥವಾ ಹಸಿರುವಾಣಿ ಹೊರೆಗಳನ್ನು ನೀಡಬೇಕಾಗಿ ವಿನಂತಿಸುತ್ತೇವೆ.

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಬಿಜೈ ಚರ್ಚ್ ರಸ್ತೆ, ಮಂಗಳೂರು

ಸಮಾಜ ಬಾಂಧವರೇ

### ಶ್ರೀ ಸುಬ್ರಹ್ಮಣ್ಯ ಸಭಾದ ವಾರ್ಷಿಕೋತ್ಸವವು

ತಾ.22-01-2012ರ ಆದಿತ್ಯವಾರದಂದು ವಿವಿಧ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿಸುತ್ತೇವೆ.

**- ಅಧ್ಯಕ್ಷರು ಮತ್ತು ಸರ್ವಸದಸ್ಯರು, ಶ್ರೀ ಸುಬ್ರಹ್ಮಣ್ಯ ಸಭಾ (ರಿ.)**

**ಕಾರ್ಯಕ್ರಮಗಳು**

| | |
|---|---|
| ಪೂರ್ವಾಹ್ನ ಗಂಟೆ 9-00 | : **ಸಾಮೂಹಿಕ ಲಲಿತಾ ಸಹಸ್ರನಾಮ ಮತ್ತು ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ** |
| ಪೂರ್ವಾಹ್ನ ಗಂಟೆ 9-30 | : **ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜಾ ಪ್ರಾರಂಭ** |
| ಪೂರ್ವಾಹ್ನ ಗಂಟೆ 10-00 | : **ಅಡುಗೆ ಸ್ಪರ್ಧೆ** (ಒಂದು ಸಿಹಿ ಮತ್ತು ಖಾರ ತಿಂಡಿಗಳನ್ನು ಮನೆಯಲ್ಲೇ ಮಾಡಿ ತರುವುದು. ಎಲ್ಲರಿಗೂ ಮುಕ್ತ ಅವಕಾಶ) |
| ಪೂರ್ವಾಹ್ನ 10-30 | : **ಹೂವು ಜೋಡಣಾ ಸ್ಪರ್ಧೆ** (ಎಲ್ಲರಿಗೂ ಮುಕ್ತ ಅವಕಾಶ) |
| **ಪಿಕ್ ಮತ್ತು ಆ್ಯಕ್ಟ್** | : ವಿಭಾಗ : **5ರಿಂದ 10 ವರ್ಷದೊಳಗಿನವರಿಗೆ 10ರಿಂದ 16 ವರ್ಷ ಮೇಲ್ಪಟ್ಟು** |
| **ಜಾನಪದ ಗೀತೆ ಮತ್ತು ಭಾವಗೀತೆ ಸ್ಪರ್ಧೆ** | : ವಿಭಾಗ : **16 ವರ್ಷದೊಳಗಿನ; 16ರಿಂದ 30 ವರ್ಷ ಒಳಗಿನ** |
| ಪೂವಾಹ್ನ ಗಂಟೆ 11-00 | : **ಮಹಾಸಭೆ** |
| ಅಪರಾಹ್ನ ಗಂಟೆ 12-30 | : **ಶ್ರೀ ಸತ್ಯನಾರಾಯಣ ಪೂಜಾ ಮಂಗಳಾರತಿ** |
| ಅಪರಾಹ್ನ ಗಂಟೆ 1-00 | : **ಭೋಜನ** |
| ಅಪರಾಹ್ನ ಗಂಟೆ 2-00 | : **ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಬಹುಮಾನ ವಿತರಣೆ** |

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ :

| **ಶ್ರೀಕಾಂತ ರಾವ್** | **ಅರುಣ ಸೋಮಶೇಖರ್** | **ಅನಿಲ್ ರಾವ್ ಬಿ.ಎಸ್.** |
|---|---|---|
| 9343361618 | 9880413243/0824-2452860 | 9880037110 |

ಸೂಚನೆ : ಸ್ಪರ್ಧೆಯಲ್ಲಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವವರು ಮುಂಚಿತವಾಗಿ ಹೆಸರು ನೋಂದಾಯಿಸಬೇಕಾಗಿ ವಿನಂತಿ.






## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

| | |
|---|---|
| ಮಂಗಳಾರತಿ | : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ |
| ಪ್ರತಿ ಸೋಮವಾರ: | ''ಸತ್ಸಂಗದವರಿಂದ ಭಜನೆ'' ಸಂಜೆ 6-00 ಗಂಟೆಯಿಂದ |
| ಪ್ರತಿ ಮಂಗಳವಾರ: | ''ಸೌಂದರ್ಯಲಹರಿ ಪಾರಾಯಣ'' ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಶುಕ್ರವಾರ | : ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಆದಿತ್ಯವಾರ | : ಸ್ವಾಧ್ಯಾಯ ಸಮಿತಿಯವರಿಂದ ''ಪಾರಾಯಣ'' ಸಂಜೆ ಗಂಟೆ 4-30ರಿಂದ |

**ಸಂಕಷ್ಟಹರ ಚತುರ್ಥಿಯಂದು (ತಾ.10-02-2012) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.28-01-2012 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.21-01-2012 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಶಿಕ್ಷಣ, ತರಬೇತಿ ಮತ್ತು ವಿದ್ಯಾರ್ಥಿ ವೇತನ ವೇದಿಕೆ

**ಶ್ರೀಶಾರದಾ ಮಂಟಪ, ಉಡುಪಿ-2**

### ಎಸ್.ಎಸ್.ಎಲ್.ಸಿ. (ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮ) ವಿದ್ಯಾರ್ಥಿಗಳಿಗೆ ಪರೀಕ್ಷಾ ತರಬೇತಿ ಶಿಬಿರ

**ದಿನಾಂಕ 11-03-2012 (ರವಿವಾರ) ಸ್ಥಳ : ಶಾರದಾ ಮಂಟಪ, ಉಡುಪಿ.**
**ಸಮಯ : ಬೆಳಿಗ್ಗೆ 9-30ರಿಂದ ಸಂಜೆ 4-30ರ ವರೆಗೆ**

ಶಿಬಿರದಲ್ಲಿ ಹಿಂದಿನ ಪಬ್ಲಿಕ್ ಪರೀಕ್ಷೆ ಮತ್ತು ಇತ್ತೀಚಿನ ಪೂರ್ವಸಿದ್ಧತಾ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ವಿತರಣೆ ಮತ್ತು ಚರ್ಚೆ, ಗಣಿತ ಮತ್ತು ವಿಜ್ಞಾನ ವಿಷಯಗಳ ಬಗ್ಗೆ ವಿವರವಾಗಿ ಹಾಗೂ ಇತರ ಎಲ್ಲಾ ವಿಷಯಗಳ ಕುರಿತು ಸಂಕ್ಷಿಪ್ತವಾಗಿ ಅನುಭವಿ ಶಿಕ್ಷಕರಿಂದ ಮಾಹಿತಿಗಳನ್ನು ನೀಡಲಾಗುವುದು.

ವಿ.ಸೂ. :
1) ವಿದ್ಯಾರ್ಥಿಗಳು ಪಠ್ಯಪುಸ್ತಕಗಳು ಮತ್ತು ಬರವಣಿಗೆ ಸಾಮಗ್ರಿಗಳೊಂದಿಗೆ ಹಾಜರಿರಬೇಕು.
2) ಶಿಬಿರಕ್ಕೆ ಯಾವುದೇ ಶುಲ್ಕ ಇರುವುದಿಲ್ಲ.
3) ಶಿಬಿರದಲ್ಲಿ ಊಟ, ಉಪಾಹಾರಗಳ ವ್ಯವಸ್ಥೆ ಇರುತ್ತದೆ.
4) ಆಸಕ್ತ ವಿದ್ಯಾರ್ಥಿಗಳು ವೇದಿಕೆಯ ಸಂಚಾಲಕರಾದ ಶ್ರೀ ಪ್ರಭಾಕರ ಭಂಡಿ (ಫೋನ್ : 9449254846) ಅಥವಾ ಅಧ್ಯಕ್ಷರಾದ ಡಾ. ವೈ. ರವೀಂದ್ರನಾಥ ರಾವ್ (ಫೋನ್ : 9972985744) ಇವರಲ್ಲಿ ನೋಂದಾಯಿಸಬೇಕಾಗಿ ವಿನಂತಿ.

ನಮ್ಮ ಸಮಾಜದ ವಿದ್ಯಾರ್ಥಿಗಳು ಈ ಶಿಬಿರದ ಸಂಪೂರ್ಣ ಪ್ರಯೋಜನವನ್ನು ಪಡೆಯಲು ಕೋರಲಾಗಿದೆ.

**- ಅಧ್ಯಕ್ಷರು ಮತ್ತು ಸದಸ್ಯರು, ಶಿಕ್ಷಣ, ತರಬೇತಿ ಮತ್ತು ವಿದ್ಯಾರ್ಥಿವೇತನ ವೇದಿಕೆ.**

॥ ಶ್ರೀ ಶ್ರೀನಿವಾಸ ವಿಶ್ವನಾಥೌ ಪ್ರಸೀದತಾಂ ॥

## ಶ್ರೀ ಶ್ರೀನಿವಾಸ ದೇವಸ್ಥಾನ ತಲೇಕಿ-ಕಡಬ

**ಅಂಚೆ : ಕಡಬ, ಪುತ್ತೂರು ತಾಲೂಕು - 574 221.**

ಆತ್ಮೀಯ ಭಕ್ತ ಮಹಾಶಯರೇ,

ಸ್ವಸ್ತಿ! ಶ್ರೀ ಶಾಲಿವಾಹನ ಶಕ ವರುಷ 1933ನೇ ಖರ ನಾಮ ಸಂವತ್ಸರದ ಮಾಘ ಶುದ್ಧ ತದಿಗೆಯಿಂದ ಸಪ್ತಮಿಯವರೆಗೆ ತಾ.26-01-2012ನೇ ಗುರುವಾರದಿಂದ ತಾ.30-01-2012ನೇ ಸೋಮವಾರದ ವರೆಗೆ

### ಶ್ರೀ ಶ್ರೀನಿವಾಸ ದೇವರ ಮತ್ತು ಶ್ರೀ ವಿಶ್ವನಾಥ ದೇವರ ಪುನಃ ಪ್ರತಿಷ್ಠಾ ಕುಂಭಾಭಿಷೇಕ ಮಹೋತ್ಸವವು

ಜಗದ್ಗುರು ಶೃಂಗೇರಿ ಶ್ರೀ ಶ್ರೀ ಶ್ರೀ ಭಾರತೀ ತೀರ್ಥ ಮಹಾ ಸನ್ನಿಧಾನಂಗಳವರ ಪೂರ್ಣಾನುಗ್ರಹದೊಂದಿಗೆ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಜರಗಲಿರುವುದು.

ಶ್ರೀ ಗುರುದೇವತಾನುಗ್ರಹದಿಂದ ನೆರವೇರುವ ಈ ದೇವತಾ ಕಾರ್ಯಕ್ರಮಕ್ಕೆ ತಾವು ಆಗಮಿಸಿ, ತನು-ಮನ-ಧನಗಳಿಂದ ಸಹಕರಿಸಿ, ಶ್ರೀದೇವರ ಪ್ರಸಾದವನ್ನು ಸ್ವೀಕರಿಸಿ, ಶ್ರೀದೇವರ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

| **ಕೆ. ಭರತೇಶ್ವರ ಶರ್ಮಾ** | **ಕೆ. ಪ್ರಕಾಶ ರಾವ್** | **ಕೆ. ಗೋಪಾಲ ರಾವ್** |
|---|---|---|
| ಗೌರವಾಧ್ಯಕ್ಷರು | ಕಾರ್ಯಾಧ್ಯಕ್ಷರು | ಅಧ್ಯಕ್ಷರು |

**ಕೆ. ರಾಜೇಶ್ ತಲೇಕಿ**
ಪ್ರಧಾನ ಕಾರ್ಯದರ್ಶಿ
**ಮತ್ತು ಸರ್ವಸದಸ್ಯರು, ಬ್ರಹ್ಮಕಲಶ ಸಮಿತಿ**

Owned & Published by : B. Krishnamoorthy Rao, Ambalpady - Secretary Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Gurushree Building, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org